# ಅಂಶ - 18 ಆಧುನಿಕ ಕಾವ್ಯ

ವಿಷಯಕ್ರಮ


18.0 ಉದ್ದೇಶ
18.1 ಪೀಠಿಕೆ
18.2 ಪದ್ಯ - 1
    18.2.1 ಪದ್ಯ ಒಂದರ ವಿಶ್ಲೇಷಣೆ, ಕವಿ ಪರಿಚಯ
18.3 ಪದ್ಯ - 2
    18.3.1 ಪದ್ಯ ಎರಡರ ವಿಶ್ಲೇಷಣೆ, ಕವಿ ಪರಿಚಯ

**ಅಭ್ಯಾಸ - 1**
18.4 ಪದ್ಯ - 3
    18.4.1 ಪದ್ಯ ಮೂರರ ವಿಶ್ಲೇಷಣೆ
**ಅಭ್ಯಾಸ - 2**
18.5 ಪದ್ಯ - 4
    18.5.1 ಪದ್ಯ ನಾಲ್ಕರ ವಿಶ್ಲೇಷಣೆ
18.6 ಪದ್ಯ - 5
    18.6.1 ಪದ್ಯ ಐದರ ವಿಶ್ಲೇಷಣೆ
18.6.2 ಪದ್ಯ ಐದನ್ನು ಅರ್ಥಮಾಡಿಕೊಳ್ಳಲು ನೆರವಾಗುವ ಅಂಶಗಳು
**ಅಭ್ಯಾಸ - 3**
18.7 ಸಾರಾಂಶ

**ಅಭ್ಯಾಸಗಳಿಗೆ ಉತ್ತರಗಳು**


## 18.0 ಉದ್ದೇಶ

- ಈ ಅಂಶವನ್ನು ಓದಿದ ನಂತರ ನೀವು ಆಧುನಿಕ ಕಾವ್ಯವನ್ನು ಅರ್ಥಮಾಡಿಕೊಳ್ಳುವಿರಿ.
- ಆಧುನಿಕ ಕಾವ್ಯದ ವಿಶೇಷತೆಗಳನ್ನು ತಿಳಿದುಕೊಳ್ಳುವಿರಿ.
- ಆಧುನಿಕ ಕಾವ್ಯದ ಭಾಷಾ ಬಳಕೆಯನ್ನು ಮನಗಾಣುವಿರಿ.
- ಭಾವನೆಗೂ ಭಾಷೆಗೂ ಇರುವ ಸಂಬಂಧವನ್ನು ಅರಿಯುವಿರಿ.
- ಯಾವುದೇ ಹೊಸ ಕವನವನ್ನು ನೀವು ಓದಿದಾಗ ಹೇಗೆ ಅರ್ಥ ಮಾಡಿಕೊಳ್ಳಬಹುದು ಎಂಬುದನ್ನು ತಿಳಿಯುವಿರಿ.

## 18.1 ಪೀಠಿಕೆ

ಈ ಕವಿತಾಭ್ಯಾಸದ ಭಾಗದಲ್ಲಿ 'ಆಧುನಿಕ ಕಾವ್ಯ' ವನ್ನು ಅಭ್ಯಾಸ ಮಾಡಲು ಬೇಕಾದ ಕೆಲವು ಅಂಶಗಳಾದ ಭಾಷೆ, ವ್ಯಾಕರಣ, ಪ್ರತಿಮೆ, ರೂಪಕ, ಶ್ಲೇಷೆ ಇವುಗಳನ್ನು ಪರಿಚಯ ಮಾಡಿಸಿಕೊಡುವ ದೃಷ್ಟಿಯಿದೆ. ಕವನಗಳು ಯಾವ ಅಂಶವನ್ನು ಪರಿಚಯ ಮಾಡಿಕೊಡುತ್ತವೋ ಆ ಅಂಶಕ್ಕೆ ಒತ್ತು ಕೊಟ್ಟು ಪರಿಚಯ ಮಾಡಿಸಲು ಆಯ್ದವುಗಳು ಮಾತ್ರ ಆಗಿವೆ. ಈ ಎಲ್ಲ ಅಂಶವನ್ನೂ ಒಂದೊಂದೇ ಕವನದಲ್ಲಿ ಮಾತ್ರ ಕಾಣಬೇಕೆಂದಿಲ್ಲ. ಒಂದೇ ಕವನದಲ್ಲಿ ಒಂದೇ ಅಂಶ ಬಂದಿರಬಹುದು. ಅಥವಾ ಒಂದೇ ಕವನದಲ್ಲಿ ಎಲ್ಲ ಅಂಶಗಳೂ ಬಂದಿರಬಹುದು. ಕವನಗಳ ಆಯ್ಕೆಯು ಸುಲಭದಿಂದ ಕಷ್ಟದ ಕಡೆಗೆ ಇರುವಂತೆ ಜೋಡಿಸಲಾಗಿದೆ. ಈ ಅಭ್ಯಾಸ ಕವನಗಳು ಬೇರೆ ಪಠ್ಯಕ್ಕಿಂತ ರೀತಿಯ ಅಭ್ಯಾಸವನ್ನು ಅಳವಡಿಸಿಕೊಂಡಿರುವುದನ್ನು ಕಾಣಬಹುದು.

## 18.2 ಪಠ್ಯ - 1

### ಮಾನವನ ಮನೆಯಲ್ಲಿ

ರಾಯರು ಬಂದರು ಮಾವನ ಮನೆಗೆ
ರಾತ್ರಿಯಾಗಿತ್ತು;
ಹುಣ್ಣಿಮೆ ಹರಸಿದ ಬಾನಿನ ನಡುವೆ
ಚಂದಿರ ಬಂದಿತ್ತು. — ತುಂಬಿದ
ಚಂದಿರ ಬಂದಿತ್ತು.

ಮಾವನ ಮನೆಯಲಿ ಮಲ್ಲಿಗೆ ಹೂಗಳ
ಪರಿಮಳ ತುಂಬಿತ್ತು.
ಬಾಗಿಲ ಬಳಿ ಕಾಲಿಗೆ ಬಿಸಿ ನೀರಿನ
ತಂಬಿಗೆ ಬಂದಿತ್ತು. — ಒಳಗಡೆ
ದೀಪದ ಬೆಳಕಿತ್ತು.

ಘಮಘಮಿಸುವ ಮೃಷ್ಟಾನ್ನದ ಭೋಜನ
ರಾಯರ ಕಾದಿತ್ತು.
ಬೆಳ್ಳಿಯ ಬಟ್ಟಲ ಗಸಗಸೆ ಪಾಯಸ
ರಾಯರ ಕರೆದಿತ್ತು — ಭೂಮಿಗೆ
ಸ್ವರ್ಗವೆ ಇಳಿದಿತ್ತು.

ಚಪ್ಪರಗಾಲಿನ ಮಂಚದ ಮೇಗಡೆ
ಮೆತ್ತನೆ ಹಾಸಿತ್ತು.
ಅಪ್ಪಟ ರೇಸಿಮೆ ದಿಂಬಿನ ಅಂಚಿಗೆ
ಚಿತ್ರದ ಹೂವಿತ್ತು. — ಪದುಮಳು
ಹಾಕಿದ ಹೂವಿತ್ತು.

ಚಿಗುರೆಲೆ ಬಣ್ಣದ ಅಡಕೆಯ ತಂದಳು
ನಾದಿನಿ ನಗು ನಗುತ;
ಬಿಸಿ ಬಿಸಿ ಹಾಲಿನ ಬಟ್ಟಲ ತಂದರು
ಅಕ್ಕರೆಯಲೆ ಮಾವ — ಮಡದಿಯ
ಸದ್ದೇ ಇರಲಿಲ್ಲ.

ಮಡದಿಯ ತಂಗಿಯ ಕರೆದಿಂತೆಂದರು:
'ಅಕ್ಕನ ಕರೆಯಮ್ಮ'
ಮೆಲು ದನಿಯಲ್ಲಿ ನಾದಿನಿ ಇಂತೆಂದಳು:
ಪದುಮಳು ಒಳಗಿಲ್ಲ — ನಕ್ಕಳು.
ರಾಯರು ನಗಲಿಲ್ಲ.

ಏರುತ ಇಳಿಯುತ ಬಂದರು ರಾಯರು
ದೂರದ ಊರಿಂದ.
ಕಣ್ಣನು ಕಡಿದರು ನಿದ್ದೆಯು ಬಾರದು
ಪದುಮಳು ಒಳಗಿಲ್ಲ: — ಪದುಮಳ
ಬಳೆಗಳ ದನಿಯಿಲ್ಲ.

ಬೆಳಗಾಯಿತು; 'ಸರಿ ಹೊರಡುವೆ' ನೆಂದರು
ರಾಯರು ಮುಳಿಸಿನಲೆ.
ಒಳಮನೆಯಲಿ 'ನೀರಾಯಿತು!' ಎಂದಳು
ನಾದಿನಿ ರಾಗದಲಿ. 'ಯಾರಿಗೆ?'
ಎನ್ನಲು ಹರುಷದಲಿ,
ಪದುಮಳು ಬಂದಳು ಹೂವನು ಮುಡಿಯುತ
ರಾಯರ ಕೋಣೆಯಲಿ.

— ಕೆ.ಎಸ್. ನರಸಿಂಹಸ್ವಾಮಿ.

## 18.2.1 ಪದ್ಯ - 1 ರ ವಿಶ್ಲೇಷಣೆ

ಈ ಕವನದಲ್ಲಿ ಕವಿಯು ಹೊಸದಾಗಿ ಮದುವೆಯಾಗಿ ಬಂದಿರುವ ಅಳಿಯನ ಒಂದು ಭಾವನೆಯನ್ನು ಹಿಡಿಯುತ್ತಾರೆ.. ಪದ್ಯ ಬಹಳ ಕಂಡರೂ ಭಾವದ ಏರಿಳಿತಗಳನ್ನು ಹಿಡಿಯಲು ಪ್ರಯೋಗವಾಗಿರುವ ಕ್ರಿಯಾ ಪದಗಳು, ನಿಷೇಧಕಗಳು ಹೇಗೆ ಬಂದಿವೆ ಎಂಬುದನ್ನು ಗಮನಿಸಬಹುದು.

'ರಾಯ' ರು ಮಾವನ ಮನೆಗೆ ಬರುವ ಉತ್ಸಾಹ ವಾತಾವರಣದಲ್ಲಿಯೇ ತುಂಬಿ ಬಂದಿದೆ. ಈ ದ ದೃಷ್ಟಿಯಿಂದ ಮೊದಲ ಮೂರು ಪದ್ಯಭಾಗಗಳಲ್ಲಿರುವ ಕ್ರಿಯಾಪದಗಳನ್ನು ಗಮನಿಸೋಣ.

ಚಂದಿರ ಬಂದಿ
ಪರಿಮಳ **ತುಂಬಿತ್ತು.**
ತಂಬಿಗೆ **ಬಂದಿತ್ತು.**
ಭೋಜನ ರಾಯರ **ಕಾದಿತ್ತು**
ಗಸಗಸೆ ಪಾಯಸ ರಾಯರ **ಕಾದಿತ್ತು**
ಭೂಮಿಗೆ ಸ್ವರ್ಗವೆ **ಇಳಿದಿತ್ತು**

ಇಲ್ಲಿ ಪ್ರಯೋಗವಾಗಿರುವ ಕ್ರಿಯಾಪದಗಳು ಕ್ರಿಯಾಸೂಚಕಗಳು. ರಾಯರ ಬರವನ್ನು ಸ್ವಾಗತಿಸಲೋಸುಗ ನಿರ್ಜೀವ ವಸ್ತುಗಳೆಲ್ಲ ಜೀವತಳೆದು ಚಲನೆಯನ್ನು ಪಡೆಯುತ್ತವೆ. ಬರು, ತುಂಬು, ಕಾಯು, ಕರೆ, ಇಳಿ. ಈ ಕ್ರಿಯಾಧಾತುಗಳೆಲ್ಲ 'ಜೈವಿಕ' ಅಂದರೆ ಮನುಷ್ಯರು ಮಾಡುವ ಕೆಲಸವನ್ನು ಸೂಚಿಸುತ್ತವೆ. ರಾಯರನ್ನು (ಅಳಿಯ)ನನ್ನು ಸ್ವಾಗತಿಸಲು ತಂಬಿಗೆಯೇ ಬರುತ್ತದೆ; ಭೋಜನ ಕಾಯುತ್ತದೆ, ಪಾಯಸ ಕರೆಯುತ್ತದೆ. ಸ್ವರ್ಗ ಭೂಮಿಗೆ ಇಳಿಯುತ್ತದೆ. ಹೀಗೆ ಈ ಕ್ರಿಯಾಪದಗಳೇ ಕವನದ ಭಾವನೆಯನ್ನು ಸೆರೆ ಹಿಡಿಯುತ್ತವೆ. ಮತ್ತು 'ಇತ್ತು, ಇತ್ತು' ಎಂಬ ಕ್ರಿಯಾಪದದ ಆವರ್ತನೆ ಸಮೃದ್ಧಿಯನ್ನು ಸೂಚಿಸುತ್ತದೆ.

ನಾಲ್ಕನೆ ಪದ್ಯಭಾಗದಲ್ಲಿ ಚಲನಶೀಲಕ್ರಿಯಾಪದಗಳಿಗೆ ಬದಲಾಗಿ ಪ್ರಯೋಗಿಸಿರುವ ಕ್ರಿಯಾಪದಗಳನ್ನು ಗಮನಿಸಬಹುದು.

ಮೆತ್ತನೆ ಹಾಸಿತ್ತು, ಚಿತ್ರದ ಹೂವಿತ್ತು.

ರಾಯರು ಬರುತ್ತಾರೆಂದರೆ ನಿರ್ಜೀವ ವಸ್ತುಗಳೇ ಸಂಭ್ರಮದಿಂದ ಇರುವಾಗ ರಾಯರಿಗೆ ಹಾಸಿದ್ದ ಹಾಸಿಗೆಯಾಗಲೀ, ಚಿತ್ರದ ಹೂವಾಗಲೀ, ಅದೂ ಪದುಮಳು ಹಾಕಿದ ಹೂ ಕುಣಿದಾಡಬೇಕಿತ್ತಲ್ಲವೆ? ಆದರೆ ಅವು ಕೇವಲ ಅಲ್ಲಿ 'ನಿರ್ಜೀವ' ವಸ್ತುವಿನಂತೆ ಇವೆ. 'ಹಾಸಿತ್ತು', 'ಹೂವಿತ್ತು' — ಕೇವಲ 'ಇದ್ದವು' ಆದ್ದರಿಂದ ಈ ಪದ್ಯಭಾಗ ರಾಯರಿಗೆ ನಿರಾಸೆಕಾದಿದೆಯೇನೋ ಎಂಬುದನ್ನು ನಿರ್ದೇಶಿಸುವಂತಿದೆ.

ಮುಂದಿನ ಪದ್ಯದಲ್ಲಿ ಯಾರಿಗಾಗಿ ರಾಯರು ಕಾದಿದ್ದಾರೋ ಅವಳ 'ದರ್ಶನ'ವೇ ಇಲ್ಲ. ಸಂತೋಷದಿಂದ ಇರಬೇಕಾದ ರಾಯರ ಬದಲು ನಾದಿನಿ ನಗುನಗುತ್ತಾ ಚಿಗುರೆಲೆ, ಬಣ್ಣದ ಅಡಕೆಯನ್ನು ತಂದಿತ್ತಿದ್ದಾಳೆ. ಹೆಂಡತಿಯ ಅಕ್ಕರೆಯ ಬದಲು ಮಾವನ ಅಕ್ಕರೆ ಇದೆ.

ಈ ಮೇಲಿನ ಪದ್ಯಗಳಲ್ಲಿ ಇದುವರೆಗೂ 'ಇತ್ತು, ಇತ್ತು' ಎಂಬ ಕ್ರಿಯಾಪದವಿದ್ದರೆ, ಇಲ್ಲಿ ಮೊದಲ ಬಾರಿಗೆ ನೇತ್ಯಾತ್ಮಕತೆಯನ್ನು ಸೂಚಿಸುವ 'ಇರಲಿಲ್ಲ' ಎಂಬ ಕ್ರಿಯಾ ನಿಷೇಧ ಬಳಕೆಯಾಗಿರುವುದರಲ್ಲಿ ರಾಯರ ಉತ್ಸಾಹವೆಲ್ಲ ಬರಸ್ರೆ ಇಳಿದಿರುವುದು ಧ್ವನಿತವಾಗುತ್ತದೆ.

ಮುಂದಿನ ಪದ್ಯಭಾಗದಲ್ಲಿ ಬರುವ ನಾದಿನಿಯ ಉತ್ತರ ಗಮನಿಸಿ. 'ಪದುಮಳು ಒಳಗಿಲ್ಲ' ಒಳಗಿಲ್ಲ — (ಬೇರೆಲ್ಲೋ ಹೋಗಿದ್ದಾಳೆ, ಬಹಿಷ್ಠೆಯಾಗಿದ್ದಾಳೆ) ಎಂಬ ಶ್ಲೇಷಾರ್ಥ[1] ಪಡೆದುಕೊಳ್ಳುವ ಧ್ವನಿ, ಮತ್ತು ನಿಷೇಧ ಕ್ರಿಯಾಪದ ರಾಯರ ತುಂಬಿ ಬಂದ ಅಸಹಾಯಕತೆಯನ್ನು ಸೂಚಿಸುತ್ತದೆ.

1 ನೋಡಿ: 'ನಾನು ಬಡವಿ ಆತ ಬಡವ' ದ.ರಾ. ಬೇಂದ್ರೆ

ಕವನದ ಮೊದಲಲ್ಲಿ ರಾಯರು ನಡೆದು ಬರುವಾಗ ಆಯಾಸವೇ ಆಗಿಲ್ಲ ಆದರೆ ಈಗ ಪದುಮಳನ್ನು ಕಾಣದೆ ಆಯಾಸ ರಾಯರಿಗೆ ಗೋಚರವಾಗುತ್ತದೆ. ಇಲ್ಲಿಯೂ ಬರುವ ನಿಷೇಧ ಕ್ರಿಯಾಪದಗಳನ್ನು ಗಮನಿಸಿ. 'ನಿದ್ದೆಯು **ಬಾರದು**', ಪದುಮಳು **ಒಳಗಿಲ್ಲ**, ಬಳೆಗಳ **ದನಿಯಿಲ್ಲ**.

ಆದರೆ ಬೆಳಗಾದ ಮೇಲೆ: ರಾಯರು ಮುಳಿಸಿನಿಂದ ಹೊರಟು ನಿಂತಾಗ ಪದುಮಳು ಬಂದಳು ಹೂವನು **ಮುಡಿಯುತ** ರಾಯರ ಕೋಣೆಯಲಿ ಪದುಮಳು ಬಂದದು ಹೂವನ್ನು 'ಮುಡಿಯುತ್ತಾ' ವರ್ತಮಾನದಲ್ಲಿದೆ. (Present Continuous) ಇದು ಹರ್ಷವು ಇನ್ನು ಯಾವಾಗಲೂ ಇದೆ ಮತ್ತು ಅದು ಮುಂದುವರಿಯುತ್ತಲೇ ಇರುತ್ತದೆ' ಎಂಬುದನ್ನೂ ಸೂಚಿಸುತ್ತದೆ.

ಹೀಗೆ ಈ ಕವನದ ವ್ಯಾಕರಣಾಂಶ ಕವನದ ಭಾವವನ್ನೂ ಹೇಳುವುದರಲ್ಲಿ ಯಶಸ್ವಿಯಾಗಿದೆ. ಆದ್ದರಿಂದ ಕಾವ್ಯವನ್ನು ಓದುವಾಗ ಸ್ವರದಿಂದ ವಾಕ್ಯರಚನೆಯವರೆಗಿನ ಭಾಷೆಯನ್ನು ಗಮನಿಸಿದರೆ ಆ ಕವನದ ಅರ್ಥವನ್ನು ಓದುಗರು ಹೆಚ್ಚಿಸಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಈ ವಿಭಾಗದಲ್ಲಿರುವ ಜಿ.ಎಸ್. ಶಿವರುದ್ರಪ್ಪನವರ 'ಮಬ್ಬಿನಿಂದ ಮಬ್ಬಿಗೆ' ಕವನದ ವಿಶ್ಲೇಷಣೆ ನೋಡಬಹುದು.

ಈ ಕವಿತೆಯನ್ನು ಬರೆದ ಕವಿ ಕನ್ನಡ ಸಾಹಿತ್ಯದಲ್ಲಿ ಪ್ರೇಮ ಕವಿತೆಗಳನ್ನು ಕೋಮಲತೆಯಿಂದ ರಚಿಸಿದ, ದಾಂಪತ್ಯದ ನೋವುನಲಿವುಗಳನ್ನು ಚಿತ್ರಿಸಿದ ಕವಿ. ನವೋದಯ ಮತ್ತು ನವ್ಯ ಎರಡು ಮಾರ್ಗಗಳಲ್ಲೂ ಈ ಕವಿ ಮೈಸೂರು ಮಲ್ಲಿಗೆ, ದೀಪದ ಮಲ್ಲಿ, ಇರುವಂತಿಗೆ; ಶಿಲಾಲತೆ, ಮನೆಯಿಂದ ಮನೆಗೆ, ತೆರೆದ ಬಾಗಿಲು ಮುಂತಾದ ಕವಿತೆಗಳನ್ನು ರಚಿಸಿದ್ದಾರೆ. 'ತೆರೆದ ಬಾಗಿಲು' ಕನ್ನಡ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿದೆ.

'ರಾಯರು ಬಂದರು' ಕವನವನ್ನು 'ಮೈಸೂರು ಮಲ್ಲಿಗೆ' ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

## 18.3 ಪಠ್ಯ - 2

### ಕುರುಡು ಕಾಂಚಾಣ

ಕುರುಡು ಕಾಂಚಾಣ ಕುಣಿಯುತಲಿತ್ತು।
ಕಾಲಿಗೆ ಬಿದ್ದವರ ತುಳಿಯುತಲಿತ್ತೋ।।
ಕುರುಡು ಕಾಂಚಾಣ।।
ಬಾಣಂತಿ ಎಲುಬ ಸಾ-
ಬಾಣದ ಬಿಳುಪಿನಾ
ಕಾಣದ ಕಿರುಗೆಜ್ಜೆ ಕಾಲಾಗಿ ಇತ್ತೋ;
ಸಣ್ಣ ಕಂದಮ್ಮಗಳ
ಕಣ್ಣೀನ ಕವಡೀಯ
ತಣ್ಣನ್ನ ಜೋಮಾಲಿ ಕೊರಳೊಳಗಿತ್ತೋ;
ಬಡವರ ವಡಲಿನ
ಬಡಬಾನಲದಲ್ಲಿ
ಸುಡು ಸುಡು ಪಂಜು ಕೈಯೊಳಗಿತ್ತೋ;
ಕಂಬನಿ ಕುಡಿಯುವ
ಹುಂಬ ಬಾಯಿಲೆ ಮೈ —
ದುಂಬಿದಂತುಧೊ ಉಧೊ ಎನ್ನುತಲಿತ್ತೋ;
ಕೂಲಿ ಕುಂಬಳಿಯವರ
ಪಾಲಿನ ಮೈದೊಗಲು
ಧೂಳಿಯ ಭಂಡಾರ ಹಣೆಯೊಳಗಿತ್ತೋ;
ಗುಡಿಯೊಳಗೆ ಗಣಣ, ಮಾ —
ಹಡಿಯೊಳಗೆ ತನನ, ಅಂ —
ಗಡಿಯೊಳಗೆ ಝಣ ಝಣ ನುಡಿಗೊಡುತಿತ್ತೋ;
ಹ್ಯಾಂಗಾರ ಕುಣಿ ಕುಣಿದು
ಮಂಗಾಟ ನಡೆದಾಗ
ಅಂಗಾತ ಬಿತ್ತೋ, ಹೆಗಲಲಿ ಎತ್ತೋ.

— ದತ್ತಾತ್ರೇಯ ರಾಮಚಂದ್ರ ಬೇಂದ್ರೆ

### 18.3.1 ಪಠ್ಯ - 2ರ ವಿಶ್ಲೇಷಣೆ

ಈ ಕವಿತೆ ಸಂಪೂರ್ಣವಾಗಿ 'ಪ್ರತಿಮೆ' ಯಿಂದಲೇ ಆಗಿರುವಂಥದ್ದು. ಕಣ್ಣಿಗೆ ಕಟ್ಟುವಂತಹ ಶಬ್ದ ಚಿತ್ರಗಳ ಜೋಡಣೆ. ವಸ್ತು, ಕ್ರಿಯೆ, ಮತ್ತು ಅಮೂರ್ತ ಆಲೋಚನೆ, ಭಾವಗಳನ್ನು ವಿವರಣಾತ್ಮಕವಾಗಿ, ಮೂರ್ತವಾಗಿ ಭಾಷೆಯಲ್ಲಿ ವಿವರಿಸುವುದೇ ಪ್ರತಿಮೆ. ಪ್ರತಿಮೆಗಳು ಕಾವ್ಯ ಸಂದರ್ಭದಲ್ಲಿ ಬಿಡಿ ಬಿಡಿಯಾಗಿ ಬರಬಹುದು. ಅಥವಾ ಒಂದೇ ಪ್ರತಿಮೆ ಬೆಳೆದು ಕವನವಾಗಬಹುದು.

ಪ್ರಸ್ತುತ ಕವನ 'ಕುರುಡು ಕಾಂಚಾಣ' ದಲ್ಲಿ ಕವಿ 'ಕುರುಡು ಲಕ್ಷ್ಮಿ' ಯು ಕಾಲಿಗೆ ಬಿದ್ದವರನ್ನು ಹೇಗೆ ತುಳಿಯುತ್ತಿದ್ದಾಳೆ, ಅವಳ ರೂಪ ಹೇಗಿತ್ತೆಂಬುದನ್ನು ಪದ್ಯದಿಂದ ಪದ್ಯಕ್ಕೆ ಬೆಳೆಸುತ್ತಾ ಹೋಗುತ್ತಾರೆ.

ಕುರುಡು ಲಕ್ಷ್ಮಿಯು ತನ್ನ ರೌದ್ರ ಕುಣಿತಕ್ಕೆ ಕಟ್ಟಿರುವ ಗೆಜ್ಜೆ ಸಾಬಾಣ (ಸಾಬೂನು) ದಂತೆ ಬಿಳಿಚಿಕೊಂಡಿರುವ ಬಾಣಂತಿಯ ಎಲುಬಿನಿಂದ ಮಾಡಿಕೊಂಡಿರುವುದು. ಕೊರಳಲ್ಲಿ ಹಾಕಿಕೊಂಡಿರುವುದು ಆಗತಾನೆ ಹುಟ್ಟಿದ ಕಂದಮ್ಮಗಳ ಕಣ್ಣಿನ ಕವಡೆ (ಗುಡ್ಡೆ)ಗಳನ್ನು ಕಿತ್ತು, ಹಸಿಹಸಿಯಾಗಿರುವಾಗಲೇ ಪೋಣಿಸಿ ಮಾಡಿದ ಮಾಲೆ.

ಈ ತಾಂಡವ ಲಕ್ಷ್ಮಿ ಕೈಯಲ್ಲಿ ಹಚ್ಚಿ ಉರಿಸುತ್ತಿರುವ ಪಂಜು ಬಡವರ ಒಡಲಿನ ಬಡಬಾನಲದಲ್ಲಿ ಅದ್ದಿ ಹಚ್ಚಿಸಿ ಕೊಂಡಿರುವುದು. ಅವಳು 'ಉಧೋ ಉಧೋ' ಎನ್ನುತ್ತಿರುವುದು ಕಂಬನಿ ಕುಡಿಯುವ ಬಾಯಲ್ಲಿ.

ಹಣೆಯಲ್ಲಿ ಇಟ್ಟಿರುವುದು ಕೂಲಿಕಂಬಳಿಯವರ ಮೈದೊಗಲಿನಲ್ಲಿರುವ ಧೂಳಿನ ಕುಂಕುಮ.

ಬಡವರ ಒಡಲೀನ ಬಡಬಾನಲದಲ್ಲಿ — : ಸುಡು ಸುಡು ಪಂಜು ಕೈಯೊಳಗಿತ್ತೋ : ಎಂಬಲ್ಲಿ ವಾಕ್ಯ ವ್ಯಾಕರಣ ಬದ್ಧವಾಗಿಲ್ಲ. ಆದರೆ 'ಅದ್ದಿ ಹಚ್ಚಿಕೊಂಡ ಪಂಜು' ಎಂದುದನ್ನು ಕಲ್ಪಿಸಿಕೊಳ್ಳಲು ಕವಿ ಓದುಗರಿಗೆ ಬಿಟ್ಟಿದ್ದಾರೆ.

ಅವಳು ಒಗೊಡುವುದು ಮಠ ದೇವಾಲಯಗಳಿಗೆ, ಶ್ರೀಮಂತರಿಗೆ ಮಾತ್ರ.

ಹೀಗೆ ಅಮೂರ್ತವಾದ ಧನಲಕ್ಷ್ಮಿ ನರ್ತನ ಮಾಡುವ ರೀತಿ ಕವನದಲ್ಲಿ ಪ್ರಯೋಗವಾಗಿರುವ ಪ್ರತಿಮೆಗಳಿಂದ ಮೂರ್ತಗೊಳ್ಳುತ್ತದೆ.

ಈ 'ಕುರುಡು ಕಾಂಚಾಣ' ಹೀಗೆ ಕುಣಿದು ಕುಣಿದು, ಮಂಗಾಟ ಆಡಿ ಅಂಗಾತ ಬೀಳುತ್ತಾಳೆ ; ಕೊನೆಗಾಣುತ್ತಾಳೆ. ಆಗ ಅವಳನ್ನು ಹೆಗಲಲ್ಲಿ ಎತ್ತಿಕೊಂಡು ಮೋಕ್ಷ ಕಾಣಿಸಬೇಕೆಂದು ಹೇಳಿ 'ಕುರುಡು ಕಾಂಚಾಣ'ದ ನಶ್ವರತೆಯ ವೇದಾಂತವನ್ನು ಈ ಕವಿತೆ ಸಾರುತ್ತದೆ.

**ಕವಿ ಪರಿಚಯ**

**ದತ್ತಾತ್ರೇಯ ರಾಮಚಂದ್ರ ಬೇಂದ್ರೆ**

'ಕುರುಡು ಕಾಂಚಾಣ' ಕವಿತೆಯನ್ನು ಬರೆದ ಕವಿ 'ಅಂಬಿಕಾತನಯ ದತ್ತ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ. ಗರಿ, ನಾದಲೀಲೆ, ಗಂಗಾವತರಣ, ಸಖೀಗೀತ ಮುಂತಾಧುವು ಅವರ ಕವಿತಾ ಸಂಗ್ರಹಗಳು. ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತವಾದ ಕೃತಿ 'ಅರಳು — ಮರಳು', ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಕವನ ಸಂಕಲನ 'ನಾಕು ತಂತಿ'.

## ಅಭ್ಯಾಸ - 1

**ಭೈರವ ನಾರಿ**

ಕುಣಿಯುವಳಾರೀ ಭೈರವ ನಾರಿ
ರಣರಂಗದಲಿ ರೌದ್ರವ ತೋರಿ?

ಕಣ್ಣುಗಳಿಂದ ಕಿಡಿಗಳ ಕಾರಿ
ದೆಸೆದೆಸೆ ದೆಸೆಗೆ ಜಡೆಯನು ಬೀರಿ
ಕೆನ್ನಾಲಿಗೆಯಿಂ ರಕ್ತವ ಸೋರಿ
ಹುಚ್ಚಳವೋಲುನ್ಮತ್ತತೆ ಮೀರಿ!

ಕಂಠದೊಳಂಜಿಪ ನರಶಿರ ಮಾಲೆ!
ಕರದಲಿ ರಂಜಿಪ ರೂಕ್ಷ ಜ್ವಾಲೆ!
ಏನಿದು ಕಾಳಿಯ ತಾಂಡವ ಲೀಲೆ?
ತೂಗುತಲಿದೆ ವಿಶ್ವದ ಉಯ್ಯಾಲೆ?

ಭ್ರೂಭಂಗದಲಿ ಕೋಟ್ಯನುಕೋಟಿ
ರಾಕ್ಷಸ ವೃಂದವ ಮುರುಮುರುದೊಟ್ಟಿ
ಶ್ಯಾಮೆಯು ನಗ್ನ ಭಯಂಕರಿಯಾಗಿ
ತಾಂಡವಗೈದಳು। ಶಂಕರಿ ಕೂಗಿ!

ನರ್ತನದಿಂದ ನವ — ಶಕ್ತಿಯು ಹೊಮ್ಮಿ
ಸೃಷ್ಟಿ ಸ್ಥಿತಿ ಲಯ ಚಕ್ರಂ ಚಿಮ್ಮಿ
ಜಡ ಚೇತನ ರೂಪುಗಳಾಗೊಡೆದು
ತೋರ್ವುದು ಸುಖ ದು:ಖಗಳನು ಹಡೆದು!

—ಕುವೆಂಪು.

**ಪ್ರಶ್ನೆಗಳು**

1. ಕುವೆಂಪು (ಕೆ.ವಿ.ಪುಟ್ಟಪ್ಪ) ಅವರ 'ಭೈರವ ನಾರಿ' ಕವನದಲ್ಲಿ 'ಪ್ರತಿಮೆ' ಯಾರದ್ದು?

..............................................................................................................
..............................................................................................................
..............................................................................................................

2. ಭೈರವ ನಾರಿ ಉನ್ಮತ್ತತೆ ಮೀರಿ ಹೇಗೆ ಕುಣಿಯುತ್ತಾಳೆ?

..............................................................................................................
..............................................................................................................
..............................................................................................................
..............................................................................................................

3. ವಿಶ್ವದ ಉಯ್ಯಾಲೆಯಲ್ಲಿ ಭೈರವನಾರಿ ಹೇಗೆ ತೂಗುತ್ತಿದ್ದಾಳೆ?

..............................................................................................................
..............................................................................................................
..............................................................................................................
..............................................................................................................

4. ಶ್ಯಾಮೆಯು ನಗ್ನ ಭಯಂಕರಿಯಾಗಿ ಏಕೆ ನೃತ್ಯ ಮಾಡುತ್ತಿದ್ದಾಳೆ?

..............................................................................................................
..............................................................................................................
..............................................................................................................
..............................................................................................................

5. ಈ ನರ್ತನದಿಂದ ಉಂಟಾಗುವ ಪರಿಣಾಮವೇನು?

..............................................................................................................
..............................................................................................................
..............................................................................................................
..............................................................................................................

**ಗಮನಿಸಿ :** 'ಕುರುಡು ಕಾಂಚಾಣ'ದಲ್ಲಿ 'ಕಾಂಚಾಣದ ನರ್ತಕಿಯ ಪ್ರತಿಮೆ ಮೂಡಿ ನಂತರ ಕ್ರಿಯೆ ನಡೆಯುವುದು. (ಕೊನೆ ಪದ್ಯ) ಚಿತ್ರಿತವಾದರೆ 'ಭೈರವ ನಾರಿ' ಯಲ್ಲಿ ಪ್ರತಿಮೆ ಮೂಡುತ್ತಲೇ ಕ್ರಿಯೆಯೂ ಜೊತೆಯಲ್ಲಿ ಸಾಗುವುದನ್ನು ಗಮನಿಸಿ.

**ಕವಿ ಪರಿಚಯ**

**ಕುವೆಂಪು (ಕೆ.ವಿ.ಪುಟ್ಟಪ್ಪ)**

ನವೋದಯ ಸಂಪ್ರದಾಯದ ಮಹತ್ವದ ಕವಿ. ಕುವೆಂಪು ಎಲ್ಲ ಸಾಹಿತ್ಯ ಪ್ರಕಾರದಲ್ಲೂ ಬರೆದಿದ್ದಾರೆ. ಕೊಳಲು, ಅಗ್ನಿಹಂಸ, ಬೆರಳ್ಗೆಕೊರಳ್, ಪ್ರಮುಖ ಕವನ ಸಂಕಲನಗಳು. ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಕಾದಂಬರಿಗಳು. 'ಶ್ರೀ ರಾಮಾಯಣ ದರ್ಶನ' ಕ್ಕೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ.

## 18.4 ಪಠ್ಯ - 3

**ನಾನು ಬಡವಿ ಆತ ಬಡವ**

ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಲಸಿಕೊಂಡೆವದನೆ ನಾವು
ಅದಕು ಇದಕು ಎದಕು

ಹತ್ತಿರಿರಲಿ ದೂರವಿರಲಿ
ಅವನೆ ರಂಗಸಾಲೆ
ಕಣ್ಣುಕಟ್ಟುವಂತ ಮೂರ್ತಿ
ಕಿವಿಗೆ ಮೆಚ್ಚಿನೋಲೆ

ಚಳಿಗೆ ಬಿಸಿಲಿಗೊಂದೆ ಹದನ
ಅವನ ಮೈಯ ಮುಟ್ಟಿ
ಅದೇ ಗಳಿಗೆ ಮೈಯ ತುಂಬ
ನನಗೆ ನವಿರು ಬಟ್ಟೆ

ಆತಕೊಟ್ಟ ವಸ್ತು ಪಡವೆ
ನನಗೆ ಅವಗೆ ಗೊತ್ತು
ತೋಳುಗಳಿಗೆ ತೋಳ ಬಂದಿ
ಕೆನ್ನೆ ತುಂಬ ಮುತ್ತು

ಕುಂದು ಕೊರತೆ ತೋರಲಿಲ್ಲ
ಬೇಕು ಹೆಚ್ಚಿಗೇನು?
ಹೊಟ್ಟೆಗಿತ್ತ ಜೀವ ಫಲವ
ತುಟಿಗೆ ಹಾಲುಜೇನು.

— ದತ್ತಾತ್ರೇಯ ರಾಮಚಂದ್ರ ಬೇಂದ್ರೆ

### 18.4.1 ಪಠ್ಯ - 3 ರ ವಿಶ್ಲೇಷಣೆ

ಈ ಕವನ ಮೇಲುನೋಟಕ್ಕೆ ಬಹಳ ಸರಳವಾಗಿಯೂ ಆಕರ್ಷಕವಾಗಿಯೂ ಕಾಣುತ್ತದೆ. ಆದರೆ, ಇಲ್ಲಿ ಬಳಕೆಯಾಗುವ ಅನೇಕ ಪದಗಳ ವಿವಿಧಾರ್ಥ ಕವನವು ಸಂಕೀರ್ಣವಾಗಿಯೂ, ಮೇಲ್ನೋಟಕ್ಕೆ ಸರಳವಾಗಿ ಕಾಣುವ ಪದಗಳು ಪಡೆಯುವ ಶ್ಲೇಷಾರ್ಥದಿಂದ ಕವನ ಆಳವಾದ ಪ್ರೇಮಿಯ, ಪ್ರೇಮದ ಅನುಭವವನ್ನು ನೀಡುತ್ತದೆ. 'ಶ್ಲೇಷ' ಎಂಬುದು ಒಂದೇ ಪದವನ್ನು ಎರಡು ಅಥವಾ ಹೆಚ್ಚು ಅರ್ಥಗಳಲ್ಲಿ ಬಳಸುವುದಕ್ಕೆ ಉಪಯೋಗಿಸುವ ಒಂದು ಅಲಂಕಾರ. ಶಾಬ್ದಿಕ ಸಾಮೀಪ್ಯ ಅಥವಾ ಸಾರೂಪ್ಯ ಇರುವ ಪದಗಳನ್ನು ಭಿನ್ನ ಅರ್ಥಗಳನ್ನು ಹೊರಡಿಸುವಂತೆ ಉಪಯೋಗಿಸುವುದೇ ಶ್ಲೇಷೆ. ಶ್ಲೇಷಾರ್ಥದ ಪ್ರಯೋಗ ಹಳಗನ್ನಡ ಕಾಲದಿಂದಲೇ ಕಾಣಬಹುದಾಗಿದೆ.

ಈ ಕವನದಲ್ಲಿ ದ.ರಾ. ಬೇಂದ್ರೆಯವರು 'ಬಡವಿ' ಯೊಬ್ಬಳು ಒಲವಿನ ಶ್ರೀಮಂತಿಕೆಯನ್ನು ತೋಡಿಕೊಳ್ಳುವ ಚಿತ್ರ ಕಣ್ಣಿಗೆ ಕಟ್ಟಿದಂತಿದೆ.

ನಾನು ಬಡವಿ ಆತ ಬಡವ
**ಒಲವೆ ನಮ್ಮ ಬದುಕು**

ಎಂಬ ಸಾಲಿನಲ್ಲಿ ಬರುವ 'ಬದುಕು' ಪದಕ್ಕೆ 'ಜೀವನ' ಅಂದರೆ ಪ್ರೇಮಿಗಳು ಜೀವಿಸುತ್ತಿರುವುದೇ ಒಲವಿನಿಂದಾಗಿ, ಈ ಅರ್ಥದಲ್ಲಿ ಜೀವನ ಎಂಬ ಅರ್ಥ ಬಂದರೆ,

**ಬಳಸಿಕೊಂಡೆವದನೆ ನಾವು**
ಅದಕು ಇದಕು ಎದಕು

ಎರಡು ಸಾಲುಗಳಿಗೆ 'ಬದುಕು' ಎಂಬುದನ್ನು ಸೇರಿಸಿಕೊಂಡು ಓದಿದರೆ 'ಬದುಕು' ವಿನ ಇನ್ನೊಂದು ಅರ್ಥವಾದ 'ಆಸ್ತಿ' (Property) ಎಂಬ ಅರ್ಥವೂ ಹೊಳೆಯುತ್ತದೆ.

ಹತ್ತಿರವಿರಲಿ ದೂರವಿರಲಿ
ಅವನೆ **ರಂಗಸಾಲೆ**

ಆತ ಕಣ್ಣಿಗೆ ಕಾಣುತ್ತಿರಲಿ ದೂರದಲ್ಲಿರಲಿ ಅವನು ಪ್ರೇಯಸಿಗೆ 'ರಂಗಸಾಲೆ' ಅವನ (ಹೃದಯದಲ್ಲಿ) ನರ್ತಿಸುತ್ತಿರುತ್ತಾಳೆ'. ತಾನು ಜೀವಿಸುವುದಕ್ಕೆ ಇರುವ ಸ್ಥಳ ಆತನೇ' ಎಂಬ ಅರ್ಥವೂ ಬರುತ್ತದೆ.

**ಕಣ್ಣು ಕಟ್ಟುವಂಥ** ಮೂರ್ತಿ

ಎಂಬಲ್ಲಿನ 'ಕಟ್ಟುವಂಥ' ಕಣ್ಣು ತುಂಬ ತುಂಬಿಕೊಂಡಿರುವವನ ಹಾಗೆ ಕಂಡರೆ, ಮತ್ತೊಂದು ಅರ್ಥದಲ್ಲಿ 'ಕಣ್ಣು ಕಟ್ಟು' ಎಂಬುದು ಮೋಡಿ ಹಾಕಿದಂತಹವನು ಎಂಬ ಅರ್ಥವನ್ನು ಸ್ಫುರಿಸುತ್ತದೆ. ಅಂತೆಯೇ 'ಇನ್ನು ಯಾರನ್ನೂ ನೋಡಬೇಕಾಗಿಲ್ಲ' ಇವನೇ 'ಕಣ್ಣು ಕಟ್ಟಿ ಬಿಟ್ಟಿದ್ದಾನೆ' ಎಂಬ ಅರ್ಥವೂ ಬರುತ್ತದೆ.

**ಕಿವಿಗೆ ಮೆಚ್ಚಿನೋಲೆ**

ಎಂಬುವಲ್ಲಿ 'ಓಲೆ' ಸೌಭಾಗ್ಯದ ಸಂಕೇತವಾದರೂ, 'ಓಲೆ' ಇನ್ನೊಂದು ಅರ್ಥದಲ್ಲಿ 'ವಡವೆ' ಯಾಗಿಯೂ ನಿಲ್ಲುತ್ತದೆ. ಹಿಂದಿನ ಪದ್ಯದಲ್ಲಿರುವ 'ಬದುಕು' ಎಂಬಂತೆ.

ಚಳಿಗೆ ಬಿಸಿಲಿಗೊಂದೆ ಹದನ
ಅವನ ಮೈಯ ಮುಟ್ಟೆ
ಅದೇ ಗಳಿಗೆ ಮೈಯ ತುಂಬ
ನನಗೆ ನವಿರು ಬಟ್ಟೆ

ಯಾವುದೇ ಸಮಯದಲ್ಲಿಯೂ ಅವನ ಮೈಯನ್ನು ಮುಟ್ಟಿದರೆ ಪ್ರೇಯಸಿಗೆ ಮೈಯಿ ತುಂಬ **ನವಿರಿನ,** ರೋಮಾಂಚನದ ಬಟ್ಟೆಯನ್ನು ಹೊದ್ದಂತಾಗುತ್ತದೆ. ಅಥವಾ ನಯವಾದ ಬಟ್ಟೆಯನ್ನು ಹೊದ್ದಂತೆ ಆಗುತ್ತದೆ.

ಆತ ಕೊಟ್ಟ ವಸ್ತು ವಡವೆ
ನನಗೆ ಅವಗೆ ಗೊತ್ತು
ತೋಳುಗಳಿಗೆ **ತೋಳು ಬಂದಿ**
ಕೆನ್ನೆ ತುಂಬ **ಮುತ್ತು.**

ಪ್ರಿಯಕರ ಪ್ರೇಯಸಿಗೆ ಕೊಟ್ಟ 'ವಸ್ತು ವಡವೆ' ಎಂದರೆ ತೋಳುಗಳಿಗೆ 'ತೋಳಬಂದಿ'ಯಾಗಿ ಅಪ್ಪಿಕೊಂಡದ್ದೇ ಅವಳಿಗೆ ವಸ್ತು. ಕೆನ್ನೆ ತುಂಬ ಕೊಟ್ಟ 'ಮುತ್ತೇ' ವಡವೆ. ಆದ್ದರಿಂದಲೇ ಆತ ಕೊಟ್ಟ ವಸ್ತು ವಡವೆ ಅವರಿಗೆ ಮಾತ್ರ ಗೊತ್ತು. ಇನ್ನೊಂದು ಅರ್ಥದಲ್ಲಿ ತೋಳಿಗೆ ಹಾಕಿಕೊಳ್ಳುವ 'ತೋಳಬಂದಿ' ಎಂಬ ವಡವೆ ಮತ್ತು ಕೆನ್ನೆಗೆ ಹಾಕಿಕೊಳ್ಳುವ ಮುತ್ತಿನ ಆಭರಣವಾದ ಮುತ್ತು.

ಕುಂದುಕೊರತೆ ತೋರಲಿಲ್ಲ
ಬೇಕು ಹೆಚ್ಚಿಗೇನು?
**ಹೊಟ್ಟೆಗಿತ್ತ ಜೀವಫಲವ**
**ತುಟಿಗೆ ಹಾಲು ಜೇನು.**

ಆತ 'ಬಡವ'ನಾದರೂ ಕುಂದುಕೊರತೆ ತೋರಲಿಲ್ಲ. ಹೆಚ್ಚಿಗೇನು ಬೇಕು ಎಂಬ ಸಂತೃಪ್ತಿಯನ್ನು ತಂದಿತ್ತ. ಜೀವ 'ಫಲ' ಹೊಟ್ಟೆಗಿತ್ತು 'ಹಸಿ'ವನ್ನು ಹಿಂಗಿಸಿದ. ತುಟಿಗೆ ಹಾಲುಜೇನಿನ ಸವಿಯನ್ನು ಕೊಟ್ಟ. ಅಂತೆಯೇ ಕಂದನ ತುಟಿಗೆ ಹಾಲನಿತ್ತು ಜೇನಿನ ಸುಖವನ್ನು ಉಣ್ಣಿಸಲು ಜೀವ ಫಲವನ್ನು ಇತ್ತ.

ಹೀಗೆ ಕವಿ ಶ್ಲೇಷಾರ್ಥವನ್ನು ಉಪಯೋಗಿಸಿ ಬಡ ಪ್ರೇಯಸಿಯೊಬ್ಬಳು ತನ್ನ ಪ್ರಿಯಕರನಿಂದ ಪಡೆಯುವ 'ಬದುಕ'ನೆಲ್ಲಾ ಪಡೆಯುವಳು ಎಂಬುದನ್ನು ನಿರೂಪಿಸಿದ್ದಾರೆ.

## ಅಭ್ಯಾಸ - 2

ಈ ಕೆಳಗೆ ಕೊಟ್ಟಿರುವ ವಚನದಲ್ಲಿ 'ತುಂಬಿ' ಎಂಬ ಪದಕ್ಕಿರುವ ಶ್ಲೇಷಾರ್ಥವನ್ನು ವಿಶ್ಲೇಷಿಸಿ.

ವಚನದಲ್ಲಿ ನಾಮಾಮೃತ ತುಂಬಿ,
ನಯನದಲ್ಲಿ ನಿಮ್ಮ ಮೂರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ,
ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ;
ಕೂಡಲ ಸಂಗಮ ದೇವ
ನಿಮ್ಮ ಚರಣ ಕಮಲದೊಳಗಾನು ತುಂಬಿ!

ಇಲ್ಲಿ 'ತುಂಬಿ' ಎನ್ನುವುದಕ್ಕೆ ನಾನು ತುಂಬಿಕೊಂಡು', ತುಂಬಿಕೊಳ್ಳಲಿ ಮತ್ತು 'ದುಂಬಿ' ಎಂಬ ಅರ್ಥಸಾಧ್ಯತೆಗಳಿವೆಯೇ ಗಮನಿಸಿ.

....................................................................................................

....................................................................................................

....................................................................................................

....................................................................................................

## 18.5 ಪಠ್ಯ - 4

ನೆರಳು

ಮೇಲೊಂದು ಗರುಡ ಹಾರುತಿಹುದು
ಕೆಳಗದರ ನೆರಳು ಓಡುತಿಹುದು
ಅದಕೊ ಅದರಿಚ್ಛೆ ಹಾದಿ
ಇದಕೊ ಹರಿದತ್ತ ಬೀದಿ.

ನೆಲ ನೆಲದಲೆ ಮನೆಯ ಮನೆಯ ಮೇಲೆ
ಕೊಳಬಾವಿ ಕಂಡು ಕಾಣದೊಲೆ
ಗಿಡಗುಲ್ಮ ತೆವರು ತಿಟ್ಟು
ಎನ್ನದಿದಕೊಂದೆ ನಿಟ್ಟು.

ಗಾಳಿ ಬೆರಗಿದರ ನೆಲದಳೋಟ!
ವೇಗಕಡ್ಡ ಬಹುದಾವ ಹೂಟ
ಸಿಕ್ಕು ದಣಿವಿಲ್ಲದಂತೆ
ನಡೆಯಿದಕೆ ನಿಲ್ಲದಂತೆ

ಇದನೋಡಿ ನಾನು ನೆನೆವೆನಿಂದು:
ಇಂಥ ನೆಳಲೇನು ಗಾಂಧಿಯೆಂದು!
ಹರಿದತ್ತ ಹರಿಯ ಚಿತ್ತ
ಈ ಧೀರ ನಡೆವನತ್ತ.

ಪು.ತಿ. ನರಸಿಂಹಾಚಾರ್.

### 18.5.1 ಪಠ್ಯ - 4ರ ವಿಶ್ಲೇಷಣೆ

'ನೆರಳು' ಈ ಕವನದಲ್ಲಿ ' ಗರುಡನ ನೆರಳು' ಪ್ರತಿಮೆಯಾಗಿ ಬೆಳವಣಿಗೆ ಹೊಂದುತ್ತ ಆ ಗರುಡ ''ಎರಡು ವಸ್ತುಗಳ ನಡುವೆ ಸಾದೃಶ್ಯವನ್ನು ಅಂದರೆ ಒಂದರಂತೆ ಮತ್ತೊಂದು'' ಎಂದು ಹೇಳುವಾಗ ಕೆಲವು ಅಂಶಗಳನ್ನು ಮಾತ್ರ ಹೋಲಿಸದೆ ಎರಡನ್ನೂ ಒಂದಕ್ಕೊಂದು ಸಮಾನ ಎಂದು ಹೇಳುವುದು ರೂಪಕವೆನಿಸುತ್ತದೆ. ಉದಾಹರಣೆಗೆ 'ಭೀಮ ಆನೆ' ಎಂದಾಗ ಭೀಮನ ಶಕ್ತಿಯನ್ನೂ ಆನೆಯ ಶಕ್ತಿಯನ್ನೂ ಒಂದಕ್ಕೊಂದು ಸಮಾನ ಎಂದು ಹೇಳಿದಂತಾಗುತ್ತದೆ. ಹೊಸ ಕಲ್ಪನೆಯು ಸುಲಭವಾಗಿ ಅರ್ಥವಾಗಬೇಕಾದರೆ ರೂಪಕಗಳ ಬಳಕೆಯಾಗುತ್ತದೆ.

ಈ ಕವನದಲ್ಲಿ ಗರುಡನ ನೆರಳಿನ ಪ್ರತಿಮೆಯನ್ನು ಬೆಳೆಸುತ್ತಾ, ಕವಿಯು 'ಅದಕ್ಕೆ ಅದರಿಚ್ಛೆ ಹಾದಿ: ಇದಕು ಹರಿದತ್ತ ಬೀದಿ' ಎಂದು ಹೇಳುತ್ತಾ, ಅವೆರಡೂ ಹರಿದಾಡದ ಜಾಗವಿಲ್ಲವೆಂದು (ಪದ್ಯ 2) ತನ್ನ ನಿಟ್ಟನ್ನು (ಗುರಿಯನ್ನು) ಸಾಧಿಸುವುದೇ ಆದರ ಧ್ಯೇಯ ಎಂದೂ ಹೇಳುತ್ತಾರೆ.

ಗರುಡನಿಗೆ ವೇಗಕ್ಕೆ ತಡೆಯೇ ಇಲ್ಲ; ಹಾರುವಿಕೆಯಿಂದ ದಣಿವೇ ಇಲ್ಲ. ಎಲ್ಲೂ ನಿಲ್ಲದಂತೆ ಹಾರುತ್ತಲೇ ಇರುತ್ತದೆ. ಹೀಗೆ ಇಂಥ ನೆಳಲೇನು ಗಾಂಧಿಯೆಂದು' ಕೊನೆಯ ಪದ್ಯದಲ್ಲಿ ಹೋಲಿಕೆ ಬಂದಾಗ (ಗರುಡನ) ನೆರಳು ಗಾಂಧಿಯ ಸಮಾನ ಎಂದು ಹೇಳಿ ರೂಪಕವನ್ನು ಸೃಷ್ಟಿಸುತ್ತಾರೆ.

ಸೂಚನೆ : 'ಹರಿದತ್ತ ಹರಿಯ ಚಿತ್ತ' ಎಂಬ ಪದಗಳ ಶ್ಲೇಷೆಯನ್ನು ಗಮನಿಸಿ.
ಪು.ತಿ.ನರಸಿಂಹಾಚಾರ್ಯ :
ಪು.ತಿ.ನ. ಎಂಬ ಕಾವ್ಯನಾಮದಿಂದ ಸುಪರಿಚಿತರಾದ ಕವಿ.

## 18.6 ಪಠ್ಯ - 4

### ಮಬ್ಬಿನಿಂದ ಮಬ್ಬಿಗೆ

1. ಆರು ಗಂಟೆಯ ಮೊಳಗು:
2. ಮೂಡಣದ ಹೆರಿಗೆ ಮನೆಯಲ್ಲಿ ಸಡಗರವೋ ಸೆಡಗರ :
3. ಕತ್ತಲಿನ ಬಸಿರು ಹೆರಿಗೆ ಮನೆಯಲ್ಲಿ ಬಂಗಾರ ಮೋರೆಯ ಕುವರ
4. ಬಂದ
5. ಉಲ್ಲಾಸಗಳ ತಂದ.
6. ಜೋಯಿಸರು ಪಂಚಾಂಗವನು ತಿರುವಿ,
7. ಸಕಲ ಗ್ರಹ ಬಲ ಸ್ಥಿತಿಯ ನೋಡಿ, ಕುಂಡಲಿ ಬರೆದು
8. ಮರಳಿದರು ಮನೆಗೆ.
9. ಅಂಬೆಗಾಲಿಟ್ಟು ಹೊಸಲು ದಾಟಿತು ಬಿಸಿಲು —
10. ಬಾಗಿಲಲಿ ಹಾಲ ಕರೆವ ಹಸು ಕೊರಳ ಗಂಟೆ ದನಿ,
11. ತುಂಬು ಕೆಚ್ಚಲಿನಲ್ಲಿ ಮೊಗವಿಟ್ಟ ಮುದ್ದು ಕರು
12. 'ಕಾ' ಎನುವ ಕಾಗೆ, ಚಿಲಿಪಿಲಿ ಗುಬ್ಬಿ, ಬಾಲವಾಡಿಪ ನಾಯಿ;
13. ಸೋಜಿಗದ ಹೊವಲು
14. ಏಳು ಗಂಟೆಯ ಮೊಳಗು :
15. ಏಳರಿಂದ ಎಂಟರ ತನಕ ಸದಾ
16. ಮಲ್ಲಿಗೆಯ ಮಳೆಗರೆವ ಕಣ್ಣು ಎರಡೆ ಎರಡು
17. ಮೇಲೆ ಮುಗಿಲಲ್ಲಿ,
18. ಕೆಳಗೆ ಹಸಿರು ಸೆರಗಿನ ಮತ್ತೆ,
19. ಈ ನಡುವೆ ಬಾಯಿಟ್ಟು ಸೀಪಿದಾಗೆಲ್ಲ ಹಾಲನ್ನು ಸುರಿವ
20. ಚಂದ್ರ ಕುಂಭಗಳೆರಡು
21. ಎಂದೂ ಯಾವಾಗಲೂ ಗಕ್ಕನೆಯ ನಿಂತ ಕೈಕೊಡದ ನಲ್ಲೆ
22. ತುಟಿಯ ಬಟ್ಟಲಿನಲ್ಲಿ
23. ಎರಡು ಗಂಟೆಗೆ ಅದಿಗೊ ಉಗುರು ಬೆಚ್ಚಗೆ ಬಿಸಿಲು
24. ಸುತ್ತ ಮರಗಿಡಗಳಲಿ ಲಾಲಿ ಹಾಡುವ ಹಕ್ಕಿ
25. ಮರದ ಗೊಂಬೆಗೂ ಜೀವ ಬಂದಿದೆ; ಕಲ್ಲು ಹರಳುಗಳೆಲ್ಲ
26. ಚಿನ್ನ - ರನ್ನ!
27. ಆ, ಆಗೋ ಕರೆಯುತಿದೆ ಪಾಠಶಾಲೆಯ ಗಂಟೆ,
28. ಸ್ಲೇಟು ಪುಸ್ತಕವನ್ನು ಹೆಗಲಿಗೇರಿಸು, ಹೊರಡು,
29. ಅಲ್ಲಿ ಕಾದಿದ್ದಾರೆ 'ಮೇಷ್ಟ್ರು'
30. ತಿದ್ದು 'ಅ ಆ ಇ ಈ', ಮಗ್ಗಿಯೊಪ್ಪಿಸು; 'ಆಟ, ಊಟ, ಓಟ'
31. ಮೆಲ್ಲನೆಯೆ ಜಾರುತಿದೆ ಬೆಳಗು ಬತ್ತಿದೆ ಮಾಟ.
32. ಹನ್ನೊಂದರಿಂದ ಹನ್ನೆರಡು;
33. ಜಂತೆ ಜಂತೆಯ ತುಂಬ ಜೇನುಗೂಡು!
34. ಕಂಡಕಂಡುದನೆಲ್ಲ ಗುದ್ದುತಿದೆ ಮರಿಗೂಳಿ
35. ಹಗಲಿರುಳು ಮಗ್ಗದಲಿ ಜೊನ್ನಗನಸಿನ ಲಾಳಿ
36. ಕವಡು ನೀರಿನ ಕೊಳದಿ ಮುಖದ ನೆರಳನು ನೋಡಿ
37. ಕಾಪ್ರು ತಿದ್ದುವ ಚಾಳಿ
38. ಎದೆ ತುಂಬ ಮೊರೆಯುತಿವೆ ಹತ್ತು ದಿಕ್ಕಿನ ಗಾಳಿ!
39. ತುಂಬದೂರಿನ ನಡುವೆ ಗೋಪುರದ ಗಡಿಯಾರ —
40. ಕಾದ ಬಿಸಿಲಿನಲಿ ಎದೆಗೆ ಒಂದು ಗಂಟೆಯ ಬಡಿತ.
41. ದೂರದಲಿ ಹಸಿರು ಚಪ್ಪರದೊಳಗೆ ಮದುವೆ ಬ್ಯಾಂಡಿನ ಮೋಡಿ,
42. ಮೈತುಂಬ ಹೂಮುಡಿದು ಹುಚ್ಚಾದ ಮರ ಚೈತ್ರದಲಿ
43. ಮೆರವಣಿಗೆ ಹೊರಟು ನಿಂತಿವೆ ನೋಡಿ.
44. ಚಿಕ್ಕ ಚಿಕ್ಕೆಗೆ ಒಂದು ಉಯ್ಯಾಲೆಯನು ತೂಗಿ
45. ದಿಗ್ದಿಗಂತದ ಸಾಲಗಾಜು ಗೋಡೆಗೆ ತಾಗಿ
46. ಜೋಕಾಲಿಯಾಡುವ ಬಯಕೆ —
47. 'ನಾನಿನಗೆ ನೀನನಗೆ ಜೇನಾಗುವಾ'.
48. ರಸದೇವ ಗಂಗೆಯಲಿ ಮೀನಾಗುವಾ'

ಒಂದು, ಎರಡು, ಮೂರು —
ಬಾರಿಸಿತು ಗಡಿಯಾರ ತನ್ನ ಪಾಡಿಗೆ ತಾನು.
ಅಯ್ಯೋ ಯಾವಾಗ ಈ ಮುಳ್ಳು ಒಂದು ಎರಡನು ದಾಟಿ ಮೂರಕ್ಕೆ ಬಂದಿತೋ,
ಹಿಡಿದುಕೋ, ಅಲ್ಲಿ ಆ ಗಡಿಯಾರಗಳ ಮುಳ್ಳು ಭದ್ರ
ಬಿಡಬೇಡ ಮುಂದಕ್ಕೆ ಕೊಂಚ ಕಾಲ.
ಗಡಿಯಾರ ನಕ್ಕಿತ್ತು 'ಎಂಥ ಚಪಲ'
ಆಷಾಢದಾಗಸದ ಗಾಳಿಪಟಗಳ ಮೇಲೆ ವಿರಹಿಯಕ್ಷನ ಸುಯ್ಲು;
ಶ್ರಾವಣದ ಮಳೆ ಬಿಸಿಲು; ಗದ್ದೆಯಲಿ ತೆನೆದೂಗುತಿವೆ ಪೈರು;
ನೀಲಿಯಂಗಳದಲೆ ಮೋಡ ಮಕ್ಕಳ ಕೇಕೆ.
ಬೀಳಲು ಬಿಡುತಿದೆ ವೃಕ್ಷ, ಟೊಂಗೆ ಟೊಂಗೆಯ ತುಂಬ
ಹಕ್ಕಿ ತೊಟ್ಟಿಲ ಕಟ್ಟಿ ಜೋಗುಳವ ಹಾಡುತಿವೆ;
ಮೈಗೆ ಹೆಣೆದಿವೆ ಬಳ್ಳಿ ಅಲ್ಲಿಂದ ಇಲ್ಲಿಂದ;
ಆಗಾಗ ಒಮ್ಮೊಮ್ಮೆ ಬಂದು ಕಾಡಿದೆ ಪ್ರಶ್ನೆ:
'ನಾ ಬಂದುದೆಲ್ಲಿಂದ'
ಗಂಟೆ ಹೊಡೆಯಿತು ನಾಲ್ಕು:
ಟೆನ್ನಿಸ್ಸಿನಾಟದಲಿ ಏನೋ ಬಳಲಿಕೆ ಸುಸ್ತು;
ಮಹಡಿ ಮೆಟ್ಟಿಲನು ಹತ್ತುವಾಗಲೂ ಕೂಡ ಏಂದಿಲ್ಲದಾಯಾಸ
ಜಂತೆಯಲಿ ಗೂಡುಕಟ್ಟಿದ ಜೇನು ಹಾರಿ ಹೋಗಿವೆ, ಈಗ
ತೂಗುತ್ತಲಿವೆ ಖಾಲಿ ಗೂಡು.
ಅಲ್ಲಲ್ಲಿ ಜೇಡ ಬಲೆಗಳ ಜಾಲ, ಸುಣ್ಣ ಬಣ್ಣವ ಬಳಿದ ಗೋಡೆಯಲ್ಲೂ ಕೂಡ
ಸುಕ್ಕು, ತರಕಲು, ಬಿರುಕು;
ಛಾವಣಿಯ ಹೆಂಚು ಮಳೆ ಬಿಸಿಲು ಗಾಳಿಯಲಿ ಉದುರಿ
ಈಗೀಗ ಜಿನುಗುತಿದೆ ಮಾಗಿ ಮಂಜಿನ ಸೋನೆ.
ಆಗಾಗ ಸುಣ್ಣ ಬಣ್ಣವ ಹೊಡೆದು ರಿಪೇರಿ ಮಾಡಿದರೆ
ಇನ್ನರ್ಧ ಶತಮಾನ ಗ್ಯಾರಂಟಿ.
ತೂಬನೆತ್ತಿದರೇನಂತೆ ಬಿಡು, ಆ ನೀರಗಂಟೆ.
ನಿಷ್ಕರುಣಿ ಗಡಿಯಾರ —
ಮುಳ್ಳು ನಾಲ್ಕನು ದಾಟಿ ಐದನೂ ಮುಟ್ಟಿ ಮುಂದಕೆ ಸಾಗುತ್ತಲಿದೆ.
ಸೂರ್ಯನ ಶಾಖ ಕಡಿಮೆಯಾಗುತ್ತಲಿದೆ ದಿನ ದಿನಕ್ಕೆ
ಬಾನ ನೀಲಿಗೆ ಹೊಳಪು ಸಾಲದು; ನೀರಿನಲಿ ರುಚಿಯಿಲ್ಲ;
ಏನು ಕಾಲವೊ ಏನೊ.
ಸಂಜೆ ಬಾನಿನ ತುಂಬ ಹಗಲ ನೆನಪಿನ ಚಿತ್ರ
ಮನೆಯಂಗಳದ ಮಬ್ಬು ಬೆಳಕಿನ ನಡುವೆ ತಡವರಿಸುತಿದೆ ಕಣ್ಣು
ಮಹಡಿ ಮೆಟ್ಟಿಲ ಮೇಲೆ ಯಾರ್ಯಾರದೋ ಹೆಜ್ಜೆ.
ಗೋಡೆ ಗಡಿಯಾರದಲಿ ಗಂಟೆ ಹೊಡೆದಿದೆ ಏಳು —
ಅದೋ ಕೇಳು,
ಯಾರೋ ಬಡಿಯುತ್ತಿದ್ದಾರೆ ಬಾಗಿಲ ಹೊರಗೆ
ಒಂದೇ ಸಮನೆ —
ಏಳು ಬಾಗಿಲನು ತೆಗೆ, ಹೆದರದಿರು ಕೊನೆಗೆ.

— ಜಿ.ಎಸ್. ಶಿವರುದ್ರಪ್ಪ

## 18.6.1 ಪಠ್ಯ - 5ರ ವಿಶ್ಲೇಷಣೆ

ಈ ಕವನದ ಮುಖ್ಯ ಆಶಯ "ಕಾಲ ಕಾಲಕ್ಕನುಗುಣವಾಗಿ ಬದುಕು ಮಜಲು ಮಜಲುಗಳನ್ನು ಇಳಿದು ಬರುತ್ತದೆ. ಕಾಲಗತಿ ತಾಳಕ್ಕನುಗುಣವಾಗಿ ಈ ಗತಿ ಬದಲಾಗುತ್ತದೆ. ಒಮ್ಮೊಮ್ಮೆ ತನ್ನ ತನದ ಅರಿವಿನಿಂದ ಕಾಲವನ್ನು ಹಿಂದಕ್ಕೆ ತಿರುಗಿಸಲು ಒದ್ದಾಡುತ್ತದೆ. ಆದರೆ ಸಾಧ್ಯವಾಗದೆ ತನ್ನ ಅಸಹಾಯಕತೆಯ ಅರಿವಾಗಿ ಅನಿವಾರ್ಯವಾಗಿ ಅದರ ನಿಯತಿಗೆ ತಲೆಬಾಗುತ್ತದೆ." 1 ಇದು ಈ ಕವನದ ಮುಖ್ಯ ಸಾರಾಂಶ. ಈ ಸಾರಾಂಶವನ್ನು ಅರಿಯಲು ಕವನದ ಒಡಲು, ಅಂದರೆ ಭಾಷೆ, ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಗಮನಿಸಬಹುದು. ಕವನದ ಈ ಸಾಲುಗಳು ವಾಕ್ಯರಚನಾದೃಷ್ಟಿಯಿಂದ ನಮ್ಮ ಗಮನಸೆಳೆಯುವುದರ ಜೊತೆಗೆ ಕವನದ ಭಾಗದ ಮೇಲೂ ಬೆಳಕು ಚೆಲ್ಲುತ್ತದೆ.

ಸಾಲು 1 : ಆರು ಗಂಟೆಯ ಮೊಳಗು :
ಸಾಲು 14 : ಏಳು ಗಂಟೆಯ ಮೊಳಗು :
ಸಾಲು 32 : ಹನ್ನೊಂದರಿಂದ ಹನ್ನೆರಡು :

ಸಾಲು 29 - 40: ತುಂಬಿದೂರಿನ ನಡುವೆ ಗೋಪುರದ ಗಡಿಯಾರ — ಕಾದ ಬಿಸಿಲಿನ ಎದೆಗೆ
ಒಂದು ಗಂಟೆಯ ಬಡಿತ.

---

1 'ಮಬ್ಬಿನಿಂದ ಮಬ್ಬಿಗೆ' (ವಿಮರ್ಶೆ) ಜಿ.ಎಚ್.ನಾಯಕ್. ಪ್ರಾಯೋಗಿಕ ವಿಮರ್ಶೆ (1971) ಸಂ.ಜಿ.ಎಸ್.ಶಿವರುದ್ರಪ್ಪ ಮತ್ತು ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಬೆಂಗಳೂರು ವಿಶ್ವವಿದ್ಯಾಲಯ : ಪುಟ 126 - 135.

ಸಾಲು 49 - 50: ಒಂದು, ಎರಡು, ಮೂರು —
ಬಾರಿಸಿತು ಗಡಿಯಾರ ತನ್ನ ಪಾಲಿಗೆ ತಾನು.
ಸಾಲು 63 : ಗಂಟೆ ಹೊಡೆಯಿತು ನಾಲ್ಕು :
ಸಾಲು 75 - 76ನಿಷ್ಕರುಣಿ ಗಡಿಯಾರ —
ಮುಳ್ಳು ನಾಲ್ಕು ದಾಟಿ ಐದನ್ನೂ ಮುಟ್ಟಿ ಮುಂದಕ್ಕೆ ಸಾಗುತ್ತಲಿದೆ.
ಸಾಲು 83 : ಗೋಡೆ ಗಡಿಯಾರದ ಗಂಟೆ ಹೊಡೆದಿದೆ ಏಳು.

ಈ ಮೇಲೆ ಉದ್ಧರಿಸುವ ಎಂಟು ಭಾಗಗಳೂ ಗಡಿಯಾರಕ್ಕೆ ಮತ್ತು ಅದು ಸೂಚಿಸುವ ಕಾಲಕ್ಕೆ ಸಂಬಂಧಪಟ್ಟ ಸಾಲು ಅಥವಾ ಸಾಲುಗಳು. ಈ ವಾಕ್ಯರಚನೆಗಳೂ ಮತ್ತು ಅವು ಕಾವ್ಯದ ಸಂದರ್ಭದಲ್ಲಿ ಪಡೆದುಕೊಳ್ಳುವ ಅರ್ಥಗಳೂ ಬಹಳ ಗಮನಾರ್ಹವಾಗಿವೆ. ಇವೆಲ್ಲವೂ ಕಾವ್ಯ ಬೆಳವಣಿಗೆಯ ಮುಖ್ಯ ಹಂತಗಳಾಗಿ ಕೆಲಸ ಮಾಡುತ್ತವೆ.

1) ''ಆರು ಗಂಟೆಯ ಮೊಳಗು:''
''ಏಳು ಗಂಟೆಯ ಮೊಳಗು''

ಈ ಎರಡು ವಾಕ್ಯಗಳೂ ವಾಕ್ಯರಚನಾ ದೃಷ್ಟಿಯಿಂದ ಅಪೂರ್ಣವಾದುವು. ಈ ವಾಕ್ಯಗಳನ್ನು ಪೂರ್ಣಗೊಳಿಸುವ ಕ್ರಿಯಾಪದಗಳು (ಮೊಳಗಿತು:ಬಾರಿಸಿತು) ವಾಕ್ಯದ ಮೇಲ್ಮೆ ರಚನೆಯಲ್ಲಿ ಬಂದಿಲ್ಲ.

ಇದು ಮಟ್ಟೆಭಾಷೆಯಾದ್ದರಿಂದ ಕವಿ ಎಲ್ಲ ವಾಕ್ಯಗಳನ್ನೂ ವ್ಯಾಕರಣ ಬದ್ಧವಾಗಿ ಪ್ರಮಾಣಭಾಷೆಯಲ್ಲೇ ಬರೆಯಬೇಕಾಗಿಲ್ಲ. ಕಾವ್ಯ ಘಟಿಸುವುದು ಇಂತಹ ಸಾಮಾನ್ಯಭಾಷೆಗಿಂತ ಭಿನ್ನವಾಗಿದ್ದಾಗಲೆ. ಇದನ್ನು ಭಾಷಾ ತದ್ಭಿನ್ನತೆ ಎಂದು ಕರೆಯುತ್ತಾರೆ. ಈ ಭಾಷಾ ತದ್ಭಿನ್ನತೆಯು ಕವಿ ಓದುಗರ ಗಮನವನ್ನು ಕಾವ್ಯದ ವಸ್ತುವಿನ ಕಡೆಗೆ ಸೆಳೆಯಲು ಬಳಸಿಕೊಳ್ಳುವ ತಂತ್ರವಾಗಿರುತ್ತದೆ. ನವ್ಯ ರೀತಿಯ ಕಾವ್ಯಗಳಲ್ಲಿ ಇಂತಹ ಪ್ರಯೋಗಗಳು ಜಾಸ್ತಿಯಾಗಿರುತ್ತವೆ. ಇದಕ್ಕೆ 'ಮುನ್ನೆಲೆ' ಎಂದು ಕರೆಯಬಹುದು. ಭಾಷಾ ತದ್ಭಿನ್ನತೆ 'ಧ್ವನಿ' ಮಟ್ಟದಿಂದ ವ್ಯಾಕರಣ, ವಾಕ್ಯರಚನಾ, ಮಟ್ಟಗಳಲ್ಲೂ ಅರ್ಥದ ಮಟ್ಟದಲ್ಲೂ ನಡೆಯುತ್ತದೆ.

(a) ಮೇಲೆ ಹೇಳಿದ ಎರಡು ವಾಕ್ಯಗಳಲ್ಲೂ ವಾಕ್ಯದ ಮೇಲ್ಮೆ ಮಟ್ಟದಲ್ಲಿ ಕ್ರಿಯಾಪದವಿಲ್ಲದಿರುವುದು ಈ ಪದ್ಯದ ಸಂದರ್ಭದಲ್ಲಿ ಕಾಲ ಕವನದ ನಾಯಕನಿಗೆ (ಅವನಿನ್ನೂ ಮಗುವಾಗಿ ಹುಟ್ಟುವುದರಿಂದ) ತನಗೆ ತಾನೇ ಅರಿವಾಗುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ಅಲ್ಲದೆ ಈ ಸಮಯದಲ್ಲಿ ಯಾರೂ ಕ್ರಿಯೆಗೆ ಗಮನ ಕೊಡುವುದಿಲ್ಲವೆಂಬುದನ್ನು ಸೂಚಿಸುತ್ತದೆ. ಏಕೆಂದರೆ ''ಮೂಡಣದ ಹೆರಿಗೆ ಮನೆಯಲ್ಲಿ ಸಡಗರವೋ ಸಡಗರ'' ಇತ್ಯಾದಿ ಪ್ರತೀಕವೂ, ಮತ್ತು ಕವನದ ನಾಯಕ 'ಕತ್ತಲಿನ ಬಸಿರು ಬಿಸಿಲಾದ ಬಂಗಾರ ಮೋರೆಯ ಕುವರ'' ಆಗಿ ಬರುವ ಮಗು. ಆದ್ದರಿಂದ ಗಂಟೆ ಹೊಡೆಯುವ, ಹೊತ್ತು ಹೋಗುವ ಅರಿವು ಅವನಿಗಿಲ್ಲ ಎಂಬುದನ್ನು ಸೂಚಿಸುತ್ತದೆ.

(b) ''ಹನ್ನೊಂದರಿಂದ ಹನ್ನೆರಡು''
ಈ ವಾಕ್ಯ ಮೇಲೆ ಹೇಳಿದ ವಾಕ್ಯದಂತಿದ್ದರೂ '— ಇಂದ' ಎಂಬುವ ತೃತೀಯ ವಿಭಕ್ತಿ ಪ್ರತ್ಯಯ ಇರುವುದರಿಂದ ಕ್ರಿಯೆ 'ಒಂದರಿಂದ ಮತ್ತೊಂದಕ್ಕೆ 1 ಸಾಗುತ್ತಿದೆ ಎಂಬುದನ್ನು ಸೂಚಿಸುತ್ತದೆ. ಈ ವಾಕ್ಯ ಗಡಿಯಾರದ ಮುಳ್ಳಿನ (ಕಾಲದ) ಅರಿವು ನಾಯಕನಿಗೆ ಅಸ್ಪಷ್ಟವಾಗಿ ಆಗುತ್ತಿದೆ ಎಂಬುದನ್ನೂ ಸೂಚಿಸುತ್ತದೆ. ಆದ್ದರಿಂದ ನಾಯಕನಲ್ಲಿ 'ಎದೆ ತುಂಬ ಮೊರೆಯುತ್ತಿದೆ ಹತ್ತು ದಿಕ್ಕಿನ ಗಾಳಿ' ಎನ್ನುವ ಭಾವವನ್ನು ಈ ವಾಕ್ಯ ಧ್ವನಿಸುತ್ತದೆ.

(c) 'ತುಂಬಿದೂರಿನ ನಡುವೆ ಗೋಪುರದ ಗಡಿಯಾರ —
ಕಾದ ಬಿಸಿಲಿನ ಎದೆಗೆ ಒಂದು ಗಂಟೆಯ **ಬಡಿತ**.''
ಈ ಸಾಲಿನಲ್ಲಿ ಬರುವ 'ಬಡಿತ' ಎಂಬ ಕ್ರಿಯಾಪದದಿಂದ ಸಾಧಿತವಾದ ನಾಮಪದ 'ಕಾದ ಬಿಸಿಲಿನ ಎದೆಗೆ' ಬಡಿಯುತ್ತದೆ. ಆದರೆ ಈ ವಾಕ್ಯದಲ್ಲೂ ಎಲ್ಲಿಯೂ ಸಂಪೂರ್ಣ ಕ್ರಿಯಾಪದ ವಾಕ್ಯರಚನಾ ಮಟ್ಟದಲ್ಲಿ ಬಂದಿಲ್ಲ. ಆದರೆ ಗಂಟೆ ಬಡಿತದ ಕ್ರಿಯೆ ನಾಯಕನ ಕಾದ ಬಿಸಿಲಿನ ಎದೆಗೆ ತಟ್ಟುತ್ತದೆ. ಕಾಲ ಅರಿವಿಗೆ ಬರುತ್ತಿದೆ. ಆದಕಾರಣ ಅವನಿಗೆ ಮದುವೆ ಇತ್ಯಾದಿ.

---

1 ತೃತೀಯಾ ವಿಭಕ್ತಿ ನಾಮವು ಒಂದು ವಾಕ್ಯದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವುದನ್ನು ತಿಳಿಸುತ್ತದೆ.

(d) ''ಒಂದು ಎರಡು ಮೂರು —
ಬಾರಿಸಿತು ತನ್ನ ಪಾಡಿಗೆ ತಾನು''
ಈಗಲೂ ಗಡಿಯಾರ ತನ್ನ ಪಾಡಿಗೆ ತಾನು ಬಾರಿಸಿದರೂ' ''ಅಯ್ಯೋ ಯಾವಾಗ ಈ ಮುಳ್ಳು ಒಂದು ಎರಡನು ದಾಟಿ ಮೂರಕ್ಕೆ ಬಂದಿತೋ : ಹಿಡಿದಿಕೋ, ಅಲ್ಲಿ ಆ ಗಡಿಯಾರಗಳ ಮುಳ್ಳು ಭದ'' ಎಂಬ ಕವನದ ಸಾಲುಗಳು,

ಮೊದಲ ಬಾರಿಗೆ ಗಡಿಯಾರ (ಕಾಲ)ಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾನೆ. ಈ ವಾಕ್ಯದಲ್ಲಿ ಮೇಲ್ಮೈ ಮಟ್ಟದಲ್ಲಿ ಬರುವ ಸಂಪೂರ್ಣ ಕ್ರಿಯಾಪದ 'ಬಾರಿಸಿತು' ಎಂಬುದು ಮೊದಲಿಗೆ ಕವನದಲ್ಲಿ ಕಾಣಿಸಿಕೊಳ್ಳುತ್ತದೆ. ಇದಕ್ಕೂ ನಾಯಕನಿಗೆ ಕಾಲದ ಪರಿವೆ ಮೂಡುವುದಕ್ಕೂ ಸಂಬಂಧ ಸ್ಪಷ್ಟವಾಗುತ್ತದೆ. ಅದಕ್ಕಾಗಿಯೇ ಕವನದ ನಾಯಕ 'ಮುಳ್ಳನ್ನು ಭದ್ರವಾಗಿ ಹಿಡಿದು' 'ಬಿಡಬೇಡ ಮುಂದಕ್ಕೆ ಕೊಂಚಕಾಲ' 'ಎಂಬ ಪ್ರತಿಕ್ರಿಯೆಯನ್ನು' ವ್ಯಕ್ತ ಮಾಡುತ್ತಾನೆ. ಇಲ್ಲಿ ಉಪಯೋಗಿಸಿರುವ ಕ್ರಿಯಾಪದದ ಕಾಲ ಭೂತಕಾಲದಲ್ಲಿದ್ದು 'ಕಾಲ ಸಂದಿದೆ' ಎಂಬುದನ್ನು ನಾಯಕನಿಗೆ ಮನದಟ್ಟು ಮಾಡಿಕೊಡುತ್ತದೆ.

(e) ''ನಿಷ್ಕರುಣಿ ಗಡಿಯಾರ —
ಮುಳ್ಳು ನಾಲ್ಕನು ದಾಟಿ ಐದನೂ ಮುಟ್ಟಿ ಮುಂದಕ್ಕೆ **ಸಾಗುತ್ತಲಿದೆ**''

ಇಲ್ಲಿಯೂ ಕ್ರಿಯಾಪದವಿದೆ. ಈ ಕಿಯಾಪದ 'ವರ್ತಮಾನ ಪ್ರಗತಿ' (Present Continuous) ಕಾಲದಲ್ಲಿರುವುದನ್ನು ಗಮನಿಸಬೇಕು. ಇದು, ನಾಯಕ 'ಗಡಿಯಾರದ ಮುಳ್ಳನ್ನು (ಕಾಲವನ್ನು) ಹಿಡಿಯಲು ಪ್ರಯತ್ನಿಸಿದರೂ 'ಕಾಲ' ನಿರಂತರವಾಗಿ ಸಾಗುತ್ತದೆ ಎಂಬುದನ್ನು ಧ್ವನಿಸುತ್ತದೆ.

'ಸೂರ್ಯನ ಶಾಖ ಕಡಿಮೆಯಾಗುತ್ತಲಿದೆ ದಿನ ದಿನಕೆ
ಬಾನ ನೀಲಿಗೆ ಹೊಳಪು ಸಾಲದು; ನೀರಿನಲ್ಲಿ ರುಚಿ ಇಲ್ಲ''

ಎಂಬುದು ನಾಯಕ ಕಾಲದ ಜೊತೆಯ ಹೋರಾಟದಲಿ ಸೋತಿರುವುದನ್ನು ಧ್ವನಿಸುತ್ತದೆ.

(f) ''ಗೋಡೆ ಗಡಿಯಾರದಲಿ ಗಂಟೆ **ಹೊಡೆದಿದೆ** ಏಳು —

ಇಲ್ಲಿ ಪ್ರಯೋಗವಾಗಿರುವ 'ಹೊಡೆದಿದೆ' ಎಂಬ ಕ್ರಿಯಾಪದವು 'ವರ್ತಮಾನ ನಿಶ್ಚಿತತೆ (Present Perfect) ಯನ್ನು ಪ್ರತಿನಿಧಿಸುತ್ತದೆ. ಕವನದ ನಾಯಕನ 'ಕಾಲ' ಮುಗಿದಿದೆ ಎಂಬುದನ್ನು' ನಿಶ್ಚಯವಾಗಿ ಸೂಚಿಸುತ್ತದೆ. ಮತ್ತು 'ಏಳು' ಎಂಬ ಪದ ನಾಮವಾಚಕವಾಗಿ 'ಗಂಟೆ'ಯನ್ನು ಪ್ರತಿನಿಧಿಸಿದರೂ, ಕ್ರಿಯಾಪದವಾಗಿ ಕ್ರಿಯೆಯನ್ನೂ ಪ್ರತಿನಿಧಿಸುತ್ತದೆ. ಆದ್ದರಿಂದ

''ಅದೋ ಕೇಳು.
ಯಾರೋ ಬಡಿಯುತ್ತಿದ್ದಾರೆ, ಬಾಗಿಲ ಹೊರಗೆ
ಒಂದೇ ಸಮನೆ
ಏಳು ಬಾಗಿಲನು ತೆಗೆ ಹೆದರದಿರು ಕೊನೆಗೆ''

ಎಂಬ ಸಾಲುಗಳು ಸಾರ್ಥಕವಾಗುತ್ತವೆ.

ಹೀಗೆ ಕವನದಲ್ಲಿ ಕವಿ ಬಳಸುವ ಕ್ರಿಯಾಪದಗಳೇ ಕವನವನ್ನು ಅರ್ಥಮಾಡಿಕೊಳ್ಳುವ ''ಮುನ್ನೆಲೆ''ಯಾಗಿ ಕೆಲಸ ಮಾಡುತ್ತವೆ.

## 18.6.2 ಪಠ್ಯ - 5ನ್ನು ಅರ್ಥಮಾಡಿಕೊಳ್ಳಲು ನೆರವಾಗುವ ಅಂಶಗಳು

(A)

1. ಸೂರ್ಯೋದಯ ಯಾರ ಜನನವಾಗಿರುವುದನ್ನು ಸೂಚಿಸುತ್ತದೆ?
2. 'ಅಂಬೆಗಾಲಿಟ್ಟು ಹೊಸಲು ದಾಟಿತು ಬಿಸಿಲು' ಎಂಬುದರ ಅರ್ಥವೇನು?
3. 'ಮೇಲೆಮುಗಿಲಲಿ : ಕೆಳಗೆ ಹಸಿರು ಸೆರಗಿನ ಮತ್ತೆ: ಈ ನಡುವೆ ಬಾಯಿಟ್ಟು ಸೀಪಿದಾಗೆಲ್ಲ ಹಾಲನು ಸುರಿವ ಚಂದ್ರ ಕುಂಭಗಳೆರಡು : ''ಮೊಲೆಯೂಡುವ ತಾಯಿಯನ್ನು ಸೂಚಿಸುತ್ತವೆಯೆ?
4. ''ಎಂಟು ಘಂಟೆಗೆ ಅಡಿಗೂ ಉಗುರು ಬೆಚ್ಚಗೆ ಬಿಸಿಲು'' ಮಗುವಿನ ಬಾಲ್ಯವನ್ನು ಹೇಗೆ ವಿವರಿಸುತ್ತವೆ?
5. 'ಹನ್ನೊಂದರಿಂದ ಹನ್ನೆರಡು'
   ನಾಯಕನ ಯೌವನವನ್ನು ಹೇಗೆ ಸೂಚಿಸುತ್ತದೆ?
6. 'ದೂರದಲ್ಲಿ ಹಸಿರು ಚಪ್ಪರದೊಳಗೆ ಮದುವೆ ಬ್ಯಾಂಡಿನ ಮೋಡಿ' ಈ ಸಾಲು ಏನನ್ನು ಹೇಳಬಯಸುತ್ತದೆ?
7. ''ಹಿಡಿದಿಕೋ ಅಲ್ಲೆ ಆ ಗಡಿಯಾರಗಳ ಮುಳ್ಳ ಭದ್ರ''
   ಎಂಬುದು ನಾಯಕನ ಯಾವ ಪರಿಸ್ಥಿತಿಯನ್ನು ಸೂಚಿಸುತ್ತದೆ?
8. 'ಆಷಾಢದಾಗಸದ ಗಾಳಿ ಪಟಗಳ ಮೇಲೆ ವಿರಹಿ ಯಕ್ಷನ ಸುಯ್ಲು' ನಾಯಕನ ಜೀವನ ನಿರರ್ಥಕತೆಯನ್ನು ಸೂಚಿಸುತ್ತದೆಯೇ?
9. 'ನಾ ಬಂದುದೆಲ್ಲಿಂದ?' ಎಂಬ ಪ್ರಶ್ನೆ ನಾಯಕನನ್ನು ಏಕೆ ಕಾಡುತ್ತದೆ?
10. ಗಡಿಯಾರವನ್ನೇಕೆ ಕವಿ 'ನಿಷ್ಕರುಣಿ' ಎಂದು ಕರೆದಿದ್ದಾರೆ?

(B)

1. ಈ ಕೆಳಕಂಡ ಪದ ಅಥವಾ ಪದಪುಂಜಗಳನ್ನು ಗಮನಿಸಿ.
   ಮೂಡಣದ ಹೆರಿಗೆ ಮನೆ, ಬಂಗಾರ ಮೋರೆಯ ಕುವರ, ಮಲ್ಲಿಗೆಯ ಮಳೆಗರೆವ ಕಣ್ಣು; ಜಾರುತಿದೆ ಬೆಳಗು ಬತ್ತಿದ ಮಾಟ. ಮೆಲ್ಲನೆಯೆ ಜಾರುತಿದೆ ಬೆಳಗು ಬಿತ್ತಿದ ಮಾಟ ಹಗಲಿರುಳು ಮಗ್ಗದಲಿ ಜೊನ್ನಗನಸಿನ ಲಾಳಿ. ಎದೆ ತುಂಬ ಮೊರೆಯುತಿವೆ ಹತ್ತು ದಿಕ್ಕಿನ ಗಾಳಿ. ಮಾಗಿ ಮಂಜಿನ ಸೋನೆ.

(C) ಕಠಿಣ ಶಬ್ದಗಳ ಅರ್ಥ
ಬೆಸಲಾದ :
ಸುಯ್ಲು :
ಜೊನ್ನ :

ಹೆಚ್ಚಿನ ಓದಿಗಾಗಿ :
1. 'ಕಾಲ ನಿಲ್ಲುವುದಿಲ್ಲ' — ಚನ್ನವೀರ ಕಣವಿ,
2. 'ಭೂತ' — ಗೋಪಾಲಕೃಷ್ಣ ಅಡಿಗ,
3. ಗಡಿಯಾರದಂಗಡಿಯ ಮುಂದೆ — ಕೆ.ಎಸ್. ನರಸಿಂಹಸ್ವಾಮಿ.

# ಅಭ್ಯಾಸ - 3

**ಈ ಪ್ರಶ್ನೆಗಳಿಗೆ ಉತ್ತರಿಸಿ.**

1. ನಾಯಕನ ಜನನವಾಗುವ ರೀತಿಯನ್ನು ಕವಿ ಹೇಗೆ ಚಿತ್ರಿಸಿದ್ದಾರೆ.

..................................................................................................................................
..................................................................................................................................
..................................................................................................................................
..................................................................................................................................
..................................................................................................................................
..................................................................................................................................

2. ಬಾಲ ಲೀಲೆ'ಯ ಚಿತ್ರಣವನ್ನು ಕೊಡಿ.

..................................................................................................................................
..................................................................................................................................
..................................................................................................................................
..................................................................................................................................
..................................................................................................................................
..................................................................................................................................

3. 'ಮೆಲ್ಲನೆಯ ಜಾರುತಿದೆ ಬೆಳಗು ಬತ್ತಿದ ಮಾಟ' ಎಂದು ಕವಿ ಏಕೆ ಹೇಳುತ್ತಿದ್ದಾರೆ?

..................................................................................................................................
..................................................................................................................................
..................................................................................................................................
..................................................................................................................................
..................................................................................................................................
..................................................................................................................................

4. ಯೌವನದ ಚಾಳಿ ಏನು?

..................................................................................................................................
..................................................................................................................................
..................................................................................................................................
..................................................................................................................................
..................................................................................................................................
..................................................................................................................................

5. ಯೌವನದ ಮೋಡಿ ಏನು?

..................................................................................................................

..................................................................................................................

..................................................................................................................

..................................................................................................................

..................................................................................................................

..................................................................................................................

6. ಕಾಲ ಮೀರಿದ್ದು ಗೊತ್ತಾದಾಗ ಕವನದ ನಾಯಕ ಹೇಗೆ ಪ್ರತಿಕ್ರಿಯೆ ನಡೆಸುತ್ತಾನೆ?

..................................................................................................................

..................................................................................................................

..................................................................................................................

..................................................................................................................

..................................................................................................................

..................................................................................................................

7. 'ಕಂಡ ಕಂಡುದನೆಲ್ಲ ಗುದ್ದುವ' ಮರುಗೂಳಿಗೆ ಆಯಾಸವಾಗುತ್ತಿದೆಯೆ? ಏಕೆ?

..................................................................................................................

..................................................................................................................

..................................................................................................................

..................................................................................................................

..................................................................................................................

..................................................................................................................

8. ಗಡಿಯಾರ ನಿಷ್ಕರುಣಿ ಎಂದೇಕೆ ಅನ್ನಿಸುತ್ತದೆ?

..................................................................................................................

..................................................................................................................

..................................................................................................................

..................................................................................................................

..................................................................................................................

..................................................................................................................

## 18.7 ಸಾರಾಂಶ

ಈ ಅಂಶವನ್ನು ಅಭ್ಯಾಸ ಮಾಡಿದ ಮೇಲೆ, ಆಧುನಿಕ ಕಾವ್ಯ ಯಾವ ರೀತಿಯಲ್ಲಿ ರಚಿಸಲ್ಪಡುತ್ತವೆ ಎಂಬುದನ್ನು ತಿಳಿದುಕೊಂಡೆವು. ಆಧುನಿಕ ಕಾವ್ಯ ಆಡುಮಾತಿಗೆ ಹೆಚ್ಚು ಹತ್ತಿರವಾಗಿದೆ ಎಂಬುದೂ, ಮತ್ತು ಅದರಿಂದಲೇ ಭಾಷೆಯನ್ನು ಕವನಕ್ಕೆ ಒಗ್ಗಿಸಲು ನಡೆಸಿದ ಪ್ರಯತ್ನಗಳನ್ನು ಗಮನಿಸಿದೆವು. ಅಂತೆಯೇ, ಕಾವ್ಯ ಭಾಷೆಯಲ್ಲಿ ಬರುವ ವಿವಿಧ ಅಂಶಗಳಾದ ವ್ಯಾಕರಣ, ಪ್ರತಿಮೆ, ಶ್ಲೇಷೆ, ಇವುಗಳು ಕಾವ್ಯ ಸಂದರ್ಭದಲ್ಲಿ ಹೊರಡಿಸುವ ಅರ್ಥಗಳನ್ನು ತಿಳಿದುಕೊಂಡೆವು.

'ಮಾವನ ಮನೆಯಲ್ಲಿ' ಎಂಬ ಕವನದಲ್ಲಿ ವ್ಯಾಕರಣಾಂಶಗಳು ಕಾವ್ಯದ ಸಂದರ್ಭದಲ್ಲಿ ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ತಿಳಿದುಕೊಂಡರೆ, 'ಕುರುಡು ಕಾಂಚಾಣ' ದಲ್ಲಿ ಪ್ರತಿಮೆಯ ಬೆಳವಣಿಗೆಯನ್ನು ಗಮನಿಸಿದೆವು.

'ನಾನು ಬಡವಿ ಆತ ಬಡವ' ಕವನದಲ್ಲಿ ಪದಮಟ್ಟದ, ವಾಕ್ಯಮಟ್ಟದ ಶ್ಲೇಷೆಗಳು ಕವನಕ್ಕೆ ವಿವಿಧ ರೀತಿಯ ಅರ್ಥ ವಿಸ್ತಾರವನ್ನು, ವ್ಯಾಪ್ತಿಯನ್ನು ನೀಡುವುದನ್ನು ಕಂಡೆವು.

'ನೆರಳು' ಕವನದಲ್ಲಿ ಪ್ರತಿಮೆಯಾಗಿ ಬೆಳೆಯುತ್ತಿರುವ ವಸ್ತು 'ರೂಪಕ'ವಾಗಿ ಬದಲಾವಣೆ ಹೊಂದಿದಾಗ ಆಗುವ ಅರ್ಥ ವ್ಯತ್ಯಾಸವನ್ನು ಗಮನಿಸಿದೆವು.

ಅಂತೆಯೇ 'ಮಬ್ಬಿನಿಂದ ಮಬ್ಬಿಗೆ' ಕವನದಲ್ಲಿ ವ್ಯಾಕರಣ ಅಂಶ, ಪ್ರತಿಮಾ ವಿಧಾನ, ಅವುಗಳ ವಿಶಿಷ್ಟ ಜೋಡಣೆಯಿಂದ ಉಂಟಾಗುವ ಪರಿಣಾಮಗಳನ್ನೂ ತಿಳಿದುಕೊಂಡೆವು.

## ಅಭ್ಯಾಸಗಳಿಗೆ ಉತ್ತರಗಳು

**ಅಭ್ಯಾಸ - 1**

**ಭೈರವ ನಾರಿ**

1. ರಣರಂಗದಲ್ಲಿ ನರ್ತಿಸುವ, ವಿಕೋಪದಿಂದ ನಾಶಗೈಯ್ಯುವ ಶಂಕರಿಯದು.
2. ಕಣ್ಣುಗಳಿಂದ ಕಿಡಿಯನ್ನು ಕಾರುತ್ತಾ, ಜಡೆಯನ್ನು ನಾನಾ ದಿಕ್ಕುಗಳಿಗೆ ಹರಡುತ್ತಾ, ಕೆನ್ನಾಲಿಗೆಯಿಂದ ರಕ್ತವನ್ನು ಸುರಿಸುತ್ತಾ ಉನ್ಮತ್ತತೆಯಿಂದ ಕುಣಿಯುತ್ತಿದ್ದಾಳೆ.
3. ಕರದಲ್ಲಿ ನರಶಿರಮಾಲೆಯನ್ನು ಧರಿಸಿ ಕೈಯಲ್ಲಿ ಉರಿಯುವ ಪಂಜನ್ನು ಹಿಡಿದು ತಾಂಡವ ಲೀಲೆ ಮಾಡುತ್ತಿದ್ದಾಳೆ. ಈ ಕುಣಿತದಿಂದ ವಿಶ್ವ ಉಯ್ಯಾಲೆಯಂತೆ ತೂಗುತ್ತಿದೆ.
4. ಭೂಭ್ರಂಗದಲ್ಲೇ ಕೋಟ್ಯನುಕೋಟಿ ರಾಕ್ಷಸರನ್ನು ಸಂಹಾರ ಮಾಡಿ ನ ೃತ್ಯ ಮಾಡುತ್ತಿದ್ದಾಳೆ.
5. ಈ ನರ್ತನದಿಂದ ಸ ೃಷ್ಟಿ ಸ್ಥಿತಿ ಲಯದ ಚಕ್ರ ಚಾಲನೆಗೊಂಡು ಜಡವೆಲ್ಲಾ ಚೇತನವಾಗಿ ಪರಿಣಮಿಸುತ್ತದೆ. ಸುಖ ದು:ಖಗಳೆರಡೂ ಇದರ ಪರಿಣಾಮದಿಂದಾಗುತ್ತದೆ.

**ಅಭ್ಯಾಸ - 2**

1. **ಮೊದಲ ಸಾಲಿನಲ್ಲಿ 'ತುಂಬ' ಮಾತಿನಲ್ಲಿ ನಾಮಾಮ ೃತ ತುಂಬಿಕೊಳ್ಳಲಿ ಎಂಬ ಕ್ರಿಯೆಯನ್ನು ಸೂಚಿಸುತ್ತದೆ. ಇದು ನಾಲಿಗೆಗೆ ಸಂಬಂಧಿಸಿದ್ದು.**
2. **ಎರಡನೆ ಸಾಲಿನಲ್ಲಿ 'ತುಂಬಿ' ಕೊಳ್ಳುವುದು ಕಣ್ಣಿನಲ್ಲಿ**
3. **ಮೂರನೆ ಸಾಲಿನಲ್ಲಿ ಮನಸ್ಸಿನಲ್ಲಿ 'ತುಂಬಿ' ಕೊಳ್ಳಲಿ ಎಂಬುದು.**
4. **ಕರ್ಣದಲ್ಲಿ 'ತುಂಬಿ' ಕೊಳ್ಳುವುದು.**
5. **ಕೊನೆಯ ಸಾಲಿನಲ್ಲಿ ಭಕ್ತ ದೇವರ (ಚರಣ) ಕಮಲದಲ್ಲಿ ಆಡುವ 'ಭ ೃಂಗ'ವೂ ಆಗಿ, ಭಕ್ತನೇ ಚರಣ ಕಮಲದಲ್ಲಿ ಆಡುವ ದುಂಬಿಯೂ ಆಗುವುದನ್ನು ಕೇಳಿಕೊಳ್ಳುವುದು.**

**ಅಭ್ಯಾಸ - 3**

1. ನಾಯಕನ ಜನನವನ್ನು ಮೂಡಣದಲ್ಲಿ ಸೂರ್ಯೋದಯವಾಗುವುದನ್ನು ಕತ್ತಲಿನ ಗರ್ಭದಿಂದ ಬಂಗಾರದ ಮೋರೆಯ ಕುವರ ಬರುತ್ತಾನೆ. ಉಲ್ಲಾಸವನ್ನು ತರುತ್ತಾನೆ. ಸೂರ್ಯನ ಹುಟ್ಟು ಸೂರ್ಯ ಉದಯದಂತೆ ಕಂಡುಬರುತ್ತದೆ.
2. ಅಂಬೆಗಾಲಿಟ್ಟು ಹೊಸಲು ದಾಟಿ ಹಾಲು ಕುಡಿದು - ಪಶು, ಪಕ್ಷಿ ಪ್ರಾಣಿಗಳೆಲ್ಲವನ್ನೂ ಬೆರಗಿನಿಂದ ನೋಡುವ ಚಿತ್ರಣವಿದೆ.
3. ಆಕಾಶದಲ್ಲಿ ಸೂರ್ಯ ಚಂದ್ರರನ್ನು ನಕ್ಷತ್ರವನ್ನು ಗಮನಿಸುತ್ತಾ, ಭೂಮಿಯಲ್ಲಿ ಹಸಿರನ್ನು ಗಮನಿಸುತ್ತಾ, ನಿರ್ಜೀವ ವಸ್ತುಗಳಲ್ಲೆಲ್ಲಾ ಜೀವವನ್ನು ಗಮನಿಸುತ್ತಾ ಪಾಠ ಶಾಲೆಗೆ ಹೋಗಿ ನಾಲ್ಕು ಗೋಡೆಗಳ ನಡುವೆ ಆಟ, ಊಟ, ಓಟ, ಕಲಿಯುತ್ತ ಹೋಗುವುದು.
   ಆದ್ದರಿಂದ ಕವಿ 'ಮೆಲ್ಲನೆಯ ಜಾರುತಿದೆ ಬೆಳಗು ಬತ್ತಿದ ಮಾಟ' ಎಂದು ಹೇಳುತ್ತಾರೆ.
4. ನಾಯಕನ ಎದೆಯಲ್ಲಿ 'ವಿಷಯ' ಗಳು ಜೊತೆಜೊತೆಯಾಗಿ ತುಂಬಿಕೊಂಡಿರುತ್ತವೆ. ಕಂಡದ್ದೆಲ್ಲವನ್ನೂ ತನ್ನದಾಗಿಸಿಕೊಳ್ಳುವ ತವಕ. ಅದಕ್ಕಾಗಿ ಪರದಾಟ. ತನ್ನನ್ನು ತಾನೇ ರೋಹಿಸಿಕೊಳ್ಳುವುದು. ಇದು ಯೌವನದ ಚಳಿ.
5. ಯೌವನದಲ್ಲಿ ಸಂಗಾತನಾಗಿ ತುಡಿತ. ಎದೆಯಲ್ಲಿ ಕೋಲಾಹಲ. 'ಪ್ರಕ ೃತಿ' ಎಲ್ಲವೂ ತನಗಾಗಿಯೇ ಇದೆ ಎಂಬ 'ಹಸುರಾದ' ಕನಸು ತುಂಬಿಕೊಂಡಿರುವುದು. ಯೌವನದೊಡನೆ ಜೋಕಾಲಿಯಾಟವಾಡುವುದು.
6. ಈಗ ನಾಯಕನ ಯೌವನದ ಸರಿಯುತ್ತಿರುವಾಗ - ಅಲ್ಲಿಯತನಕ ಕಾಲದ ಪರಿವೆಯೇ ಇಲ್ಲದವನು ಕಾಲ ಜಾರುತ್ತಿದೆಯಲ್ಲ, ಹಿಡಿದು ನಿಲ್ಲಿಸಲು ಸಾಧ್ಯವಿಲ್ಲವೇ ಎಂದು ಪರಿತಪಿಸುತ್ತಾನೆ. ಆಗ ನಡೆದುಬಂದ ದಾರಿಯನ್ನು ಗುರುತಿಸಲು ತವಕಿಸುತ್ತಾನೆ.
7. ನಾಯಕನಿಗೆ ಬಳಲಿಕೆ, ಯಾವುದರಲ್ಲೂ ಆಸಕ್ತಿ ಇಲ್ಲ. ಆಯಾಸ, ಚಲನೆ ಇಲ್ಲದೆ ಜೇಡ ಜೀವನದಲ್ಲಿ ಬಲೆ ಕಟ್ಟಿದೆ. ದೇಹ ಶಿಥಿಲವಾಗುತ್ತಿದೆ. ಸರಿಯಾಗಿ ಕಾಪಾಡಿಕೊಂಡು ಬಂದರೆ ಇನ್ನೂ ಐವತ್ತು ವರ್ಷ ಬದುಕಬಹುದು. ಬಾಲ್ಯದ ಯೌವನದ ನೆನಪು ಕಾಡುತ್ತಿದೆ.
8. ದೇಹದ ಶಕ್ತಿ ಉಡುಗುತ್ತಿದೆ. ಎಲ್ಲದರಲ್ಲೂ ನಿರಾಸಕ್ತಿ. ದ ೃಷ್ಟಿಶಕ್ತಿ ಕಡಿಮೆಯಾಗುತ್ತದೆ. ಕಾಲ ಕೆಟ್ಟಿದೆ ಎನ್ನಿಸುತ್ತದೆ. ಆದ್ದರಿಂದ ಗಡಿಯಾರದ ಮೇಲೆ ಕೋಪ.